40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೩೫. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 6—10—1974 | VOL. 40. No. 35.

ಮಂಗಳೂರು—ಉಳ್ಳಾಲ ನಡುವೆ ನೇರ ಡಾಯಲಿಂಗ್

ಮಂಗಳೂರು ಉಳ್ಳಾಲಗಳ ನಡುವೆ ನೇರ ಡಾಯಲಿಂಗ್ ಟೆಲಿಫೋನ್ ಸಂಪರ್ಕ ಕ್ರಮಬದ್ಧಗೊಳಿಸುವ ಕಾರ್ಯ ಈಗಾಗಲೇ ಆರಂಭಗೊಂಡಿದ್ದು, ಮುಂದಿನ ಕೆಲವು ದಿನಗಳೊಳಗೆ ಈ ಕಾರ್ಯ ಸಂಪೂರ್ಣಗೊಳ್ಳುವುದೆಂದು ಟೆಲಿಕಮ್ಯೂನಿಕೇಶನ್ ಜನರಲ್ ಮೆನೇಜರ್ ಶ್ರೀ ವಸಂತರಾವ್‌ರವರು ನಿನ್ನೆ (ತಾ. ೫ರಂದು) ಮಂಗಳೂರಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಂಗಳೂರು—ಉಡುಪಿ ನೇರ ಡಾಯಲಿಂಗ್

ಉಡುಪಿ ಮಂಗಳೂರುಗಳೊಳಗೆ ನೇರ ಡಾಯಲಿಂಗ್ ಸಂಪರ್ಕ ವ್ಯವಸ್ಥೆ (ಹೈ ಫ್ರಿಕ್ವೆನ್ಸಿ ಸಿಸ್ಟಮ್)ಯನ್ನು ತಾ. ೫ರಂದು ಮಂಗಳೂರು ಕದ್ರಿ ಸುಜೀರ್ ಸಿ. ವಿ. ನಾಯಕ್ ಹೊಲಿನಲ್ಲಿ ನಗರಸಭಾಧ್ಯಕ್ಷ ಶ್ರೀ ಬ್ಲೇಸಿಯಸ್ ಡಿ'ಸೋಜಾರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಕೆ. ಕೆ. ಸೆಟ್ಟಿ, ಎಂ. ಪಿ. ಅವರು ಉದ್ಘಾಟಿಸಿದರು. ಕೇಂದ್ರ ಘನ ಉದ್ದಿಮೆ ಸಚಿವ ಶ್ರೀ ಟಿ. ಎ. ಪೈಯವರಿಂದ ಉಡುಪಿಯಿಂದ ಬಂದ ಕೊಲನ್ನು ಶ್ರೀ ಸೆಟ್ಟಿಯವರು ಸ್ವೀಕರಿಸಿ, ಇಲ್ಲಿಂದ ಶ್ರೀ ಪೈಯವರಿಗೆ ಕೊಲ್ ಮಾಡುವುದರ ಮೂಲಕ ಉದ್ಘಾಟನೆ ನಡೆಯಿತು. ಪ್ರಾರಂಭದಲ್ಲಿ ಟೆಲಿಕಮ್ಯೂನಿಕೇಶನ್ ಜನರಲ್ ಮೆನೇಜರ್ ಶ್ರೀ ವಸಂತರಾವ್‌ರವರು ಸ್ವಾಗತಿಸಿ, ಸಂಪರ್ಕ ವ್ಯವಸ್ಥೆಯ ಪೂರ್ಣ ವಿವರಗಳನ್ನಿತ್ತರು. ಈ ವ್ಯವಸ್ಥೆ ರಾಷ್ಟ್ರದಲ್ಲೇ ಮೊತ್ತಮೊದಲನೆಯದೆಂದೂ ಅವರು ತಿಳಿಸಿದರು. ಮುಂದೆ ಭಾರತದ ಪ್ರಮುಖ ನಗರಗಳೊಡನೆ ಮಂಗಳೂರಿಗೆ ಈ ವ್ಯವಸ್ಥೆಯ ಮೂಲಕ ನೇರ ಸಂಪರ್ಕ ಕಲ್ಪಿಸಿಕೊಡಲಾಗುವುದೆಂದೂ ಅವರು ಹೇಳಿದರು. ಶ್ರೀ ಕೆ. ಕೆ. ಸೆಟ್ಟಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಜಿಲ್ಲೆಯಲ್ಲಿ ಅಂಚೆ ಮತ್ತು ತಂತಿ ಇಲಾಖೆಯ ಸೇವೆಯನ್ನು ಶ್ಲಾಘಿಸಿದರು. ಮಂಗಳೂರಿನ ಅಂಚೆ ತಂತಿ ಇಲಾಖೆ ಸಾಧಿಸಿದ ಹಲವು ಪ್ರಥಮಗಳಲ್ಲಿ ಇನ್ನೊಂದು ಪ್ರಥಮ ಕೂಡಿಬಂದುದಕ್ಕೆ, ಅಧ್ಯಕ್ಷತೆ ವಹಿಸಿದ್ದ ಶ್ರೀ ಬ್ಲೇಸಿಯಸ್ ಡಿ'ಸೋಜಾ ಹರ್ಷ ವ್ಯಕ್ತಪಡಿಸಿದರು. ಕೊನೆಯಲ್ಲಿ ಟೆಲಿಫೋನ್ಸ್ ಡಿವಿಜನಲ್ ಇಂಜಿನಿಯರ್ ಶ್ರೀ ಎಂ. ಕೆ. ಮೆನನ್ ಧನ್ಯವಾದ ಅರ್ಪಿಸಿದರು.

ಜಿಲ್ಲಾ ಶೈಕ್ಷಣಿಕ ಸಮ್ಮೇಳನ

ಬದಲಾಗುತ್ತಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಯಲ್ಲಿ ಶಿಕ್ಷಣವನ್ನು ಹೆಚ್ಚು ಉಪಯುಕ್ತಗೊಳಿಸುವ ನಿಟ್ಟಿನಲ್ಲಿ ವಿಚಾರವಿನಿಮಯ ಮಾಡುವ ಹಾಗು ನರ್ಸರಿಯಿಂದ ಹಿಡಿದು ವಿಶ್ವವಿದ್ಯಾಲಯ ತನಕ ನಡೆಯುವ ಶಿಕ್ಷಣದ ವಿವಿಧ ಹಂತಗಳಲ್ಲಿ ದುಡಿಯುವ ಶಿಕ್ಷಕವರ್ಗದಲ್ಲಿ ಸಮಾನಭಾವನೆ ಬಲಗೊಳಿಸುವ ಉದ್ದೇಶದಿಂದ ಜನವರಿ ಪ್ರಥಮವಾರದಲ್ಲಿ ಜಿಲ್ಲಾಮಟ್ಟದ ಶೈಕ್ಷಣಿಕ ಸಮ್ಮೇಳನ ನಡೆಸಲು ಉಡುಪಿಯಲ್ಲಿ ಜರಗಿದ ಶಿಕ್ಷಕ ಸಂಘಗಳ ಕಾರ್ಯದರ್ಶಿಗಳ ಸಭೆಯಲ್ಲಿ ನಿಶ್ಚೈಸಲಾಗಿದೆ.

ಪುಟಾಣಿಗಳಿಗೆ ಕ್ರಿಕೆಟ್ ತರಬೇತಿ

ಮಂಗಳೂರಿನ ಅರಳುತ್ತಿರುವ ಕ್ರಿಕೆಟ್ ಪ್ರತಿಭೆಗಳಿಗೆ ತರಬೇತಿ ನೀಡುವ ಮೂರು ತಿಂಗಳ ತರಬೇತಿ ಕಾರ್ಯಕ್ರಮವೊಂದನ್ನು ಜಿಲ್ಲಾ ಯೂತ್ ಸರ್ವಿಸ್ ಆಶ್ರಯದಲ್ಲಿ ರೂಪಿಸಲಾಗಿದ್ದು, ಇದೀಗ ನೆಹರೂ ಮೈದಾನದಲ್ಲಿ ಸುಮಾರು 62 ಮಂದಿ ಪುಟಾಣಿ ಪ್ರತಿಭೆಗಳಿಗೆ ನಗರದ ಕ್ರಿಕೆಟ್ ಕೋಚ್ ಶ್ರೀ ಎಸ್. ಗೋಪಾಲ ಪೈಯವರು ತರಬೇತಿ ನೀಡುತಿದ್ದಾರೆ.

ಶ್ರೀ ಕುಂದೇಶ್ವರ ಸಂಸ್ಕೃತಿ ಸಭಾ

ಸಾಂಸ್ಕೃತಿಕ, ಸಾಮಾಜಿಕ ಮತ್ತು ಧಾರ್ಮಿಕ ಸೇವೆಗಳಿಗಾಗಿ ಯುವಜನರಿಂದ ಸ್ಥಾಪಿತವಾದ "ಶ್ರೀ ಕುಂದೇಶ್ವರ ಸಾಂಸ್ಕೃತಿಕ ಸಭಾ" ಎಂಬ ಹೊಸ ಸಂಸ್ಥೆಯನ್ನು ಇತ್ತೀಚೆಗೆ ಕುಂದಾಪುರದಲ್ಲಿ ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಎಲ್. ಕಾರಂತರು ವಹಿಸಿದ್ದರು. ಸಭೆಯ ಸಂಸ್ಥಾಪಕ ಸಾಹಿತಿ ಶ್ರೀ ವಿಶುಕುಮಾರ್ ಅವರು ಸಭೆಯ ಉದ್ದೇಶಗಳ ನಿರೂಪಣೆಮಾಡಿದರು.

ಹಿಂದುಸ್ಥಾನಿ ಸಂಗೀತ ತರಗತಿ

ಭಾರತೀಯ ವಿದ್ಯಾಭವನದ ಮಂಗಳೂರು ಕೇಂದ್ರದ ಆಶ್ರಯದಲ್ಲಿ ಹಿಂದುಸ್ಥಾನಿ ಸಂಗೀತ ತರಗತಿಯನ್ನು ನಗರದ ಖ್ಯಾತ ನೇತ್ರವೈದ್ಯ ಹಾಗು ಸಂಗೀತ ಕಲಾ ಪ್ರಸಾರಕ ಸಂಘದ ಅಧ್ಯಕ್ಷ ಡಾ। ಸಿ. ಆರ್. ಕಾಮತ್‌ರವರು ಉದ್ಘಾಟಿಸಿದರು. ಸಂಗೀತ ತರಗತಿಯ ಅಧ್ಯಾಪಕರಾಗಿ ಹಲವಾರು ವರ್ಷಗಳಿಂದ ಆ ಕ್ಷೇತ್ರದಲ್ಲಿ ದುಡಿಯುವ ಶ್ರೀ ಎಂ. ನಾರಾಯಣ ಪೈಯವರು ಕೆಲಸ ನಿರ್ವಹಿಸಿದ್ದಾರೆ.

ರಾಜ್ಯ ವೈಟ್‌ಲಿಫ್ಟಿಂಗ್ ಸ್ಪರ್ಧೆ

ಶಿವಮೊಗ್ಗದಲ್ಲಿ ನಡೆದ ಕರ್ನಾಟಕ ರಾಜ್ಯ ಭಾರ ಎತ್ತುವ ಸ್ಪರ್ಧೆಯಲ್ಲಿ 98 ಅಂಕಗಳನ್ನು ಗಳಿಸಿದ ಮಂಗಳೂರಿನ ಬಲಮಾರುತಿ ವ್ಯಾಯಾಮ ಮಂಡಲವು ಟೀಂ ಪ್ರಶಸ್ತಿ ಪಡೆಯಿತು. ದ್ವಿತೀಯ ಸ್ಥಾನವನ್ನು 92 ಅಂಕ ಗಳಿಸಿದ ಮಂಗಳೂರಿನದೇ ಆದ ಬಾಲಾಂಜನೇಯ ವ್ಯಾಯಾಮ ಮಂಡಲ ಗಳಿಸಿತು. ಹೆವಿ ವೈಟ್ ಮತ್ತು ಮಿಡ್ ಹೆವಿ ವೈಟ್ ಸ್ಪರ್ಧೆಗಳಲ್ಲಿ ಬಾಲಮಾರುತಿ ವ್ಯಾಯಾಮ ಮಂಡಲದ ರಾಷ್ಟ್ರೀಯ ಜೂನಿಯರ್ ಚ್ಯಾಂಪಿಯನ್, ನಗರ್ ನಾರಾಯಣ ಶೆಣೈ ಮತ್ತು ಮಹಾಬಲ ರೈಯವರು ಅನುಕ್ರಮವಾಗಿ ಪ್ರಥಮ ಸ್ಥಾನಪಡೆದರು. ಮಿಡ್ಲ್ ವೈಟ್ ವಿಭಾಗದಲ್ಲಿ ಬಾಲಾಂಜನೇಯ ತಂಡದ ಕಮಲಾಕ್ಷ ಶೆಟ್ಟಿಯವರೂ ಲೈಟ್ ವೈಟ್ ವಿಭಾಗದಲ್ಲಿ ಅದೇ ತಂಡದ ಕುಂಞಣ್ಣ ಶೆಟ್ಟಿಯವರೂ ಪ್ರಥಮಸ್ಥಾನ ಗಳಿಸಿದ್ದರು. ರಾಜ್ಯ ದೇಹದಾರ್ಢ್ಯ ಸ್ಪರ್ಧೆಯ "ಶ್ರೀ ಕರ್ನಾಟಕ 1974" ಪ್ರಶಸ್ತಿಯನ್ನು ಉಡುಪಿಯ ಶ್ರೀ ಬಿ. ಮಾಧವ ಶೆಟ್ಟಿಯವರು ಪಡೆದರು.

ನೇತ್ರ ಚಿಕಿತ್ಸಾ ಶಿಬಿರ


ಬ್ರಹ್ಮಾವರ—ಬಾರಕೂರು ಲಾಯನ್ಸ್ ಕ್ಲಬ್ಬಿನ ನೇತೃತ್ವದಲ್ಲಿ ಮಣಿಪಾಲ ಕಸ್ತೂರ್ ಬಾ ಜನರಲ್ ಆಸ್ಪತ್ರೆಯ ನೇತ್ರತಜ್ಞ ಡಾ। ಕೆ. ಪಿ. ಎಸ್. ಶ್ರೀನಿವಾಸರಾವ್ ಮತ್ತು ಬಳಗದವರಿಂದ ತಾ. ೫ರಂದು ಕೋಟದ ಗಿಳಿಯಾರು ಪ್ರಾಥಮಿಕ ಶಾಲೆಯಲ್ಲಿ ನೇತ್ರಚಿಕಿತ್ಸಾ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು. ಸುಮಾರು 700 ಕ್ಕೂ ಮಿಕ್ಕಿ ನೇತ್ರಪರೀಕ್ಷೆ ನಡೆದು 100 ಕ್ಕೂ ಅಧಿಕ ಶಸ್ತ್ರಕ್ರಿಯೆಗಳು ನಡೆದಿವೆಯಾಗಿ ತಿಳಿದುಬಂದಿದೆ. ನೇತ್ರರೋಗಿಗಳಿಗೆ ಉಚಿತ ಊಟ, ಕಾಫಿ, ಔಷಧ ಹಾಗು ಕನ್ನಡಕಗಳನ್ನು ಬಾರಕೂರು ಲಾಯನ್ಸ್ ಕ್ಲಬ್ಬಿನವರು ಒದಗಿಸಿದ್ದರು.

ಲೀಗ್ ಕ್ರಿಕೆಟ್ ಪಂದ್ಯಗಳು

ಕೆನರಾ ಕ್ರಿಕೆಟ್ ಕ್ಲಬ್ಬಿನ ಲೀಗ್ ಪಂದ್ಯಗಳು ನೆಹರೂ ಮೈದಾನಿನಲ್ಲಿ ಆರಂಭವಾಗಿವೆ. ತಾ. ೫ರಂದು ನಡೆದ ಪಂದ್ಯಾಟದಲ್ಲಿ ಮಂಗಳೂರು ಕೋಲ್ಟ್ಸ ಟೀಮು ಸೈಂಟ್ ಎಲೋಸಿಯಸ್ ಕೊಲೇಜ್ ವಿರುದ್ಧ ಜಯಪಡೆಯಿತು. ಕೋಲ್ಟ್ಸ ಕ್ಲಬ್ಬಿನ ರಾಜಾರಾಮರ ಅಜೇಯ 97 ಈ ಪಂದ್ಯದ ಮುಖ್ಯ ಆಕರ್ಷಣೆಯಾಗಿತ್ತು.

——

ಹೆನ್ರಿ ಥೋರೋ ಹಾಗೂ ಮಹಾತ್ಮ ಗಾಂಧಿ



(ಲೇಖಕ: ಪ್ರಿಯಾ ಕರುಣಾಕರ್)

ಗಾಂಧಿಜಿಯವರು, ಪ್ರತಿಭಟನೆಯ ಅಸ್ತ್ರವಾಗಿ ಅಹಿಂಸಾತ್ಮಕ ಅಸಹಕಾರವನ್ನು ಬಳಸುವ ತತ್ವಕ್ಕೆ, ಗಾಂಧೀಜಿಗೆ ಥೋರೋ ಪ್ರೇರಕರಾದರು. ಥೋರೋ-ಭಾರತೀಯ ತತ್ವಜ್ಞಾನದಿಂದ ಪ್ರಭಾವಿತರಾದರು.

ಶ್ರೀಮಂತರ ಠಕ್ಕು ಔದಾರ್ಯ, ಮಧ್ಯಮವರ್ಗದವರ ಸ್ವಾರ್ಥಪರತೆ ಮತ್ತು ಅವರು ನಡೆಸುವ ಧಾರ್ಮಿಕಸಂಸ್ಥೆಗಳ ಬೂಟಾಟಿಕೆಗಳನ್ನು ಥೋರೋ ಹೊರಹಾಕಿದರು.

ಥೋರೋ ಅವರು ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಮಹಾ ವಿದ್ವಾಂಸರಾಗಿದ್ದರು. ಅವರು ಅನೇಕ ಪುರಾತನ ಧಾರ್ಮಿಕ ಗ್ರಂಥಗಳನ್ನು ಓದಿದ್ದರು. ಮತ್ತು ಭಗವದ್ಗೀತೆಯಿಂದ ವಿಶೇಷವಾಗಿ ಆಕರ್ಷಿತರಾಗಿದ್ದರು.

ಭಗವದ್ಗೀತೆಯು ಓದುಗನನ್ನು ಒಂದು ಉನ್ನತ, ನಿರ್ಮಲ ಹಾಗೂ ಅಪೂರ್ವ ವಿಚಾರಪ್ರಪಂಚಕ್ಕೊಯ್ಯುತ್ತದೆ. ಇನ್ನಾವ ಗ್ರಂಥವೂ ಈ ಮಟ್ಟಕ್ಕೊಯ್ಯುವುದಿಲ್ಲ ಎಂದು ಅವರು ಒಮ್ಮೆ ಹೇಳಿದ್ದರು.

ಆದರೆ ಅವರು ಸಂಪೂರ್ಣವಾಗಿ ಅಮೆರಿಕನ್ ವ್ಯಕ್ತಿಯಾಗಿದ್ದರು. ಭಾರತೀಯ ವಿಚಾರಗಳ ಅಂಧಾನುಯಾಯಿಯಾಗಿರಲಿಲ್ಲ. ಅವರ ಜೀವನ ದೃಷ್ಟಿ ಮತ್ತು ಭಾರತೀಯ ತತ್ವಶಾಸ್ತ್ರಜ್ಞರುಗಳು ಬೋಧೆಗಳ ನಡುವೆ ಬಲಿಷ್ಠ ಬಾಂಧವ್ಯವಿತ್ತು ಎಂದು ಅವರು ಹೇಳಿದ್ದಾರೆ. ಅವರು ಭಾರತದ ಬಗೆಗೆ ನಿಕಟವಾದ ಪ್ರೇಮಾದರಗಳನ್ನು ಹೊಂದಿದ್ದರು.

ಹೆನ್ರಿ ಥೋರೋ ಅವರು ಆಗಾಗ್ಗೆ ಭಾರತದೊಡನೆ ತಮ್ಮ ಸಂಬಂಧದ ಬಗ್ಗೆ ಹಾಗೂ ತಾನು ಎಷ್ಟುಮಟ್ಟಿಗೆ ಆ ರಾಷ್ಟ್ರಕ್ಕೆ ಋಣಿ ಎಂಬ ಬಗೆಗೆ ಮಾತನಾಡುತ್ತಿದ್ದರು. ತಮ್ಮ ಮರಣದ ಅನೇಕ ವರ್ಷಗಳ ನಂತರ ಗಾಂಧೀಯವರ ವಿಚಾರಗಳಿಗೆ ಪ್ರಚೋದನೆ ನೀಡುವ ಮೂಲಕ ಮತ್ತು ಮಹಾತ್ಮರ ಸಾಮಾಜೀ-ರಾಜಕೀಯ ತತ್ವದ ಮೂಲ ಆಧಾರವಾದ ವ್ಯಕ್ತಿಯ ಘನತೆ ಹಾಗೂ ಹಕ್ಕುಗಳ ಬಗೆಗೆ ಅವರ ವಿಚಾರವನ್ನು ರೂಪಿಸುವ ಮೂಲಕ ಸ್ವಲ್ಪಮಟ್ಟಿಗೆ ಆ ಋಣವನ್ನು ತೀರಿಸಿದರು.

ಪ್ರತಿಯಾಗಿ ಗಾಂಧಿಯವರು ತಮ್ಮ ವಿಚಾರಗಳಿಗೆ, ಮುಖ್ಯವಾಗಿ ಪ್ರತಿಭಟನೆಯ ಅಸ್ತ್ರವಾಗಿ ಅಹಿಂಸಾತ್ಮಕ ಅಸಹಕಾರವನ್ನು ಬಳಸುವ ತತ್ವಕ್ಕೆ ಥೋರೋ ಅವರ ಕೊಡುಗೆಯನ್ನು ಬಹಿರಂಗವಾಗಿ ಒಪ್ಪಿಕೊಂಡರು. 1942ರಲ್ಲಿ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟರಿಗೆ ಕಳುಹಿಸಿದ ಸಂದೇಶವೊಂದರಲ್ಲಿ ಗಾಂಧಿಯವರು ತಾವು ಎಷ್ಟರಮಟ್ಟಿಗೆ ಥೋರೋ ಅವರ ಬರೆಹಗಳಿಂದ ಪ್ರಭಾವಿತರಾದರೆಂಬುದನ್ನು ತಿಳಿಸಿದ್ದರು. ಮತ್ತೆ ಅದೇ ವರ್ಷ ಅಮೆರಿಕದ ಜನತೆಗೆ ಬರೆದ ಬಹಿರಂಗ ಪತ್ರವೊಂದರಲ್ಲಿ ಅವರು ಹೇಳಿದರು: "ಅಹಿಂಸಾತ್ಮಕ ಅಸಹಕಾರದ ಬಗ್ಗೆ ಥೋರೋ ಅವರ ಪ್ರಬಂಧವು ನಾನು ಮಾಡುತ್ತಿರುವ ಕಾರ್ಯದ ವೈಜ್ಞಾನಿಕ ಸಮರ್ಥನೆಯಾಗಿದೆ. ಇಂಥ ಗು[illegible]ನ್ನು ನೀವು ನನಗೆ ನೀಡಿರುವಿ."

ಗಾಂಧಿಯವರು ಕೇಂಬ್ರಿಜ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಮೊದಲ ಬಾರಿಗೆ ಥೋರೋ ಅವರ ವ್ಯಕ್ತಿವಾದದ ಬಗ್ಗೆ ಅವರ ಗಮನ ಸೆಳೆಯಿತು. ಅನಂತರ 1907 ರಲ್ಲಿ ಅವರು ಈ ಪ್ರಬಂಧವನ್ನು ಅನುವಾದಮಾಡಿ (ಮುಂದೆ ಅದು ಇಡೀ ಭಾರತೀಯ ಸ್ವಾತಂತ್ರ್ಯ ಚಳವಳಿಯ ಮೇಲೆ ಗಮನಾರ್ಹ ಪ್ರಭಾವ ಬೀರಿತು) ದಕ್ಷಿಣ ಆಫ್ರಿಕದಲ್ಲಿ ತಮ್ಮ ವರ್ಣಭೇದದ ವಿರುದ್ಧ ಚಳವಳಿಯಲ್ಲಿ ಕರಪತ್ರವಾಗಿ ಹಂಚಿದರು.

ಭಾರತಕ್ಕೆ ಹಿಂದಿರುಗಿ ಗಾಂಧಿಯವರು ಬ್ರಿಟಿಷ್ ಪಾರ್ಲಿಮೆಂಟಿನ ಶಾಸನಗಳನ್ನು ಎದುರಿಸಲು ಥೋರೋ ಅವರ ಅಹಿಂಸಾತ್ಮಕ ಅಸಹಕಾರ ನೀತಿಯನ್ನು ಬಳಸಿದರು, ಮತ್ತು ತಮ್ಮ ಸತ್ಯಾಗ್ರಹ ಅಸ್ತ್ರದ ಒಂದು ಭಾಗವಾಗಿ ಈ ನೀತಿಯನ್ನು ಅಳವಡಿಸಿಕೊಂಡರು.

ಭಾರತದ ಮಹಾತ್ಮ ಹಾಗೂ ಅಮೆರಿಕನ್ ದಾರ್ಶನಿಕರಿಬ್ಬರೂ ಇನ್ನೂ ಅನೇಕ ವಿಷಯಗಳಲ್ಲಿ ಉಭಯಸಮಾನ ಆಸಕ್ತಿ ಹೊಂದಿದ್ದರು. ಥೋರೋ ಅವರು ಅಡವಿಯಲ್ಲಿ ತಮ್ಮ ಮನೆಕಟ್ಟಿಕೊಂಡ ಎರಡು ವರ್ಷಗಳ ಅವಧಿಯಲ್ಲಿ ಸರಳ ಜೀವನಕ್ಕೆ ಹಿಂದಿರುಗಿದುದು ಮತ್ತು ತಾವೇ ಕೈಯಾರೆ ಬೆಳೆದುದನ್ನು ತಿಂದು ಜೀವಿಸಿದ ಆದರ್ಶವು ಗಾಂಧಿಯವರ ಸೇವಾಗ್ರಾಮ ಕಲ್ಪನೆಗೆ ಸ್ಫೂರ್ತಿಯಾಯಿತು. ಅವರ ಸರಳ ಜೀವನ ಮತ್ತು ಆದರ್ಶ ಮಹಾತ್ಮರಲ್ಲೂ ಪ್ರತಿಬಿಂಬವಾಗಿದೆ. ಸತ್ಯದ ಅನ್ವೇಷಣೆಯಲ್ಲಿ ಅವರಿಬ್ಬರೂ ಒಂದೇ ಆದರ್ಶಹೊಂದಿದ್ದರು. ಇಬ್ಬರೂ ಈ ತತ್ವವನ್ನು ವೈಯಕ್ತಿಕ ಹಾಗೂ ಜೀವನದ ಗುರಿಯಾಗಿಟ್ಟುಕೊಂಡಿದ್ದರು.

ಥೋರೋ, ಅವರ ಜೀವನದುದ್ದಕ್ಕೂ ಬಹಿರಂಗವಾಗಿ ಸರಳ ಜೀವನ ನಡೆಸಿದರು. ಮಸಾಚುಸೆಟ್ಸ್‌ನ ಬೊಸ್ಟನ್ ಸಮೀಪದ ಕಾಂಕಾರ್ಡ್ ಎಂಬ ಚಿಕ್ಕ ಊರಿನಲ್ಲಿ 1817ರಂದು ಜನಿಸಿದ ಅವರು ಒಬ್ಬ ಪೆನ್ಸಿಲ್ ತಯಾರಕನ ಮಗ. ಅವರು ತಮ್ಮ ಜೀವಿತ ಅವಧಿಯಲ್ಲಿ ಖ್ಯಾತಿಯನ್ನು ಗಳಿಸಲಿಲ್ಲ, ಯಾರೂ ಅವರ ವ್ಯಕ್ತಿತ್ವದ ಹಿರಿಮೆಯನ್ನು ಗು[illegible]ತಿಸಲಿಲ್ಲ. ಪ್ರಾಚೀನ ಶಾಸ್ತ್ರಗಳಲ್ಲಿ ಉತ್ತಮ ಜ್ಞಾನ ಮತ್ತು ಗ್ರೀಕ್, ಲೆಟಿನ್ ಮತ್ತು ಇಂಗ್ಲಿಷ್ ಸಾಹಿತ್ಯಗಳಲ್ಲಿ ಪ್ರಾವಿಣ್ಯತೆ ಒಲವು ಹೊಂದಿದ್ದ ಅವರು ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಪದವೀಧರರಾದರು, ಅನಂತರ ಒಂದು ಗ್ರಾಮರ್ ಸ್ಕೂಲ್‌ನಲ್ಲಿ ಬೋಧಿಸಲಾರಂಭಿಸಿದರು. ಆದರೆ ವಿದ್ಯಾರ್ಥಿಗಳಿಗೆ ದೈಹಿಕವಾಗಿ ಶಿಕ್ಷೆ ವಿಧಿಸಬೇಕಾಗುವುದು ಎಂದು ತಿಳಿದಾಗ ಆ ವೃತ್ತಿಯನ್ನು ತ್ಯಜಿಸಿದರು.

ಅನಂತರ ಅವರು ಅಮೆರಿಕದ ಪ್ರಮುಖ ವಿದ್ವಾಂಸ ಹಾಗೂ ತತ್ವಶಾಸ್ತ್ರಜ್ಞ ರಾಲ್ಫ್ ವಾಲ್ಡೋ ಎಮರ್ಸನ್‌ರವರನ್ನು ಭೇಟಿಯಾದರು. ಅವರ ಮುಂದಿನ ಸ್ನೇಹವು ಪ್ರಾಯಶಃ ಥೋರೋ ಅವರ ಜೀವನದಲ್ಲಿ ಪ್ರಭಾವ ಬೀರಿದ ಅತಿ ಮುಖ್ಯ ಘಟನೆಯಾಗಿತ್ತು. ಎಮರ್ಸನ್‌ರವರ ಗ್ರಂಥಭಂಡಾರದಲ್ಲಿ ಪೌರಸ್ತ್ಯ ಸಾಹಿತ್ಯದ ಅಧ್ಯಯನದಲ್ಲಿ ಅವರು ಮಗ್ನರಾದರು. ಇಬ್ಬರೂ ಕೊನೆಯಿಲ್ಲದ ಆಧ್ಯಾತ್ಮಿಕ ಚರ್ಚೆಗಳಲ್ಲಿ ನಿರತರಾಗಿದ್ದರು ಮತ್ತು ಕಾಲ್ನಡಿಗೆಯ ಅಭ್ಯಾಸವಿಟ್ಟುಕೊಂಡಿದ್ದರು.

ಅವರು ಬಹಳ ನಿಷ್ಠಾವಂತರಾದ ಆದರೆ ಕೆಲವು ಸಮಯಗಳಲ್ಲಿ ನಿಷ್ಠುರವಾದ ಸ್ನೇಹಿತರಾಗಿದ್ದರು. ಏಕೆಂದರೆ ತರ್ಕ, ವಿಚಾರ ಶಕ್ತಿಗಳು ಅವರಿಗೆ ಸಹಜವಾಗಿಯೇ ಕರಗತವಾಗಿದ್ದವು. ಸ್ವಭಾವದಿಂದ ಅವರು ಬಹಳ ಸೂಕ್ಷ್ಮಮತಿ ಹಾಗೂ ಆತ್ಮಾಭಿಮಾನವುಳ್ಳವರಾಗಿದ್ದರು. ಅನಂತರ ಅವರು ಎಮರ್ಸನ್‌ರ ಸೋದರನ ಮಕ್ಕಳಿಗೆ ಪಾಠಹೇಳಲು ಹೋದರು. ಜತೆಗೇ ನ್ಯೂಯಾರ್ಕ್‌ನ ಪುಸ್ತಕ ಪ್ರಕಟಣೆ ಕ್ಷೇತ್ರವನ್ನೂ ಪ್ರವೇಶಿಸಿದರು. ಆದರೆ ಈ ಕಾರ್ಯದಲ್ಲಿ ಸಂಪೂರ್ಣ ವಿಫಲರಾದರು. 1845ರಲ್ಲಿ ಏಕಾಂತವಾಸಕ್ಕೆ ಹಿಂದಿರುಗಿ ಕಾಂಕಾರ್ಡ್‌ಗೆ ಒಂದು ಮೈಲಿ ದೂರದ ವಾಲ್ಡೆನ್ ಪಾಂಡ್‌ನಲ್ಲಿ ಎರಡು ವರ್ಷಗಳ ಕಾಲ ಆಶ್ರಮಜೀವನ ನಡೆಸಿದರು. ತಮ್ಮ ಸುತ್ತುಮುತ್ತಲಿನ ನೈಸರ್ಗಿಕ ಪರಿಸರ ಹಾಗೂ ವನ್ಯಜೀವನದ ಬಗೆಗೆ ಯೋಚಿಸುತ್ತಾ, ಬರೆಯುತ್ತಾ ಕಾಲಕಳೆದರು. ತಮ್ಮ ಅನುಭವವನ್ನು ಸ್ಮರಿಸುವ ಅವರ ಪುಸ್ತಕ 'ವಾಲ್ಡೆನ್' ಅನಂತರ ಒಂದು ಶ್ರೇಷ್ಠ ಗ್ರಂಥವಾಗಿ ಅಂತರರಾಷ್ಟ್ರೀಯ ಪುರಸ್ಕಾರ ಪಡೆಯಿತು.

1846ರಲ್ಲಿ ಅವರು ಎಲ್ಲಿಯ ವರೆಗೆ ಫೆಡರಲ್ ಹಣವು ಮೆಕ್ಸಿಕನ್ ಯುದ್ಧ ಮತ್ತು ಗುಲಾಮಗಿರಿಯ ವಿಸ್ತರಣೆಗೆ ಬಳಕೆಯಾಗುವುದೋ ಅಲ್ಲಿಯ ವರೆಗೆ ತೆರಿಗೆಗಳನ್ನು ಕೊಡುವುದಿಲ್ಲ ಎಂದು ಹೇಳಿ, ಅದಕ್ಕೆ ಬದಲಾಗಿ ಜೈಲುವಾಸ ಅನುಭವಿಸಿದರು. ಪರಿಣಾಮವಾಗಿ ಅಹಿಂಸಾತ್ಮಕ ಅಸಹಕಾರದ ಬಗೆಗೆ ಅವರ ಸುಪ್ರಸಿದ್ಧ ಪ್ರಬಂಧ ರಚನೆಯಾಯಿತು. ಅದರಲ್ಲಿ ಅವರು ಹೇಳಿದ್ದಾರೆ: "ಯಾವ ಸರ್ಕಾರ ಅಧಿಕಾರವನ್ನು ನಡೆಸುವುದಿಲ್ಲವೋ ಅದು ಅತ್ಯುತ್ತಮ ಸರ್ಕಾರ. ಜನ ಅದಕ್ಕೆ ಸಿದ್ಧರಾದಾಗ ಅಂಥ ಸರ್ಕಾರವನ್ನು ಅವರು ಪಡೆಯುವರು." ಇದೇ ಪ್ರಬಂಧ ಮುಂದೆ ಗಾಂಧಿ ಮತ್ತು ಟಾಲ್‌ಸ್ಟಾಯ್ ಅವರುಗಳಿಗೆ ಸ್ಫೂರ್ತಿ ನೀಡಿತು.

ಥೋರೋ ಅವರು ಮೋಸಗಾರಿಕೆ, ಸೋಮಾರಿತನ ಹಾಗೂ ಬೂಟಾಟಿಕೆಗಳನ್ನು ದ್ವೇಷಿಸುತ್ತಿದ್ದರು. ತಮ್ಮ ಸಮಾಜದ ಆಡಂಬರಗಳ ಬಗೆಗೆ ನಿಷ್ಠುರವಾಗಿ ಮಾತನಾಡುತ್ತ ಅವರು 19ನೇ ಶತಮಾನದ ಅಮೆರಿಕನ್ ಬಹುಸಂಖ್ಯಾತರ ಅಭಿಪ್ರಾಯದ ಪೊಳ್ಳುತನವನ್ನು ಖಂಡಿಸಿದರು. ಶ್ರೀಮಂತರ ಠಕ್ಕು ಔದಾರ್ಯ, ಮಧ್ಯಮ ವರ್ಗದವರ ಸ್ವಾರ್ಥಪರತೆ ಮತ್ತು ಅವರು ನಿರ್ವಹಿಸುವ ಧಾರ್ಮಿಕ ಸಂಸ್ಥೆಗಳ ಬೂಟಾಟಿಕೆಗಳನ್ನು ಹೊರಹಾಕಿದರು. ಅವರ ದೃಷ್ಟಿಯಲ್ಲಿ ಸಮಸ್ಯೆಗಳ ಪರಿಹಾರವು ವೈಯಕ್ತಿಕ ಪ್ರಜ್ಞೆಯಲ್ಲಿದೆ: "ಯಾವುದೇ ಸಮಯದಲ್ಲಿ ನನಗೆ ಸರಿ ಎನಿಸಿದುದನ್ನು ಮಾಡುವ ಹಕ್ಕು ಮಾತ್ರ ನನಗಿದೆ."

ಗಾಂಧೀಜಿಯವರು ಥೋರೋ ಅವರಲ್ಲಿ ತಮ್ಮ ಕಾರ್ಯಗಳ ವೈಜ್ಞಾನಿಕ ಸಮರ್ಥನೆಯನ್ನು ಕಂಡರೆ, ಮಸಾಚುಸೆಟ್ಸ್‌ನ ಈ ಬಿಚ್ಚು ಮಾತಿನ ವ್ಯಕ್ತಿ ಪೌರಸ್ತ್ಯ ವಿಚಾರದಲ್ಲಿ ತಮ್ಮ ಅಧ್ಯಾತ್ಮವಾದಕ್ಕೆ ತಾತ್ವಿಕ ಸಮರ್ಥನೆಯನ್ನು ಕಂಡುಕೊಂಡರು.

ಥೋರೋ ತಮ್ಮ ಶಕ್ತಿಯನ್ನು ಅಂತರ್ಯದಲ್ಲಿ ಹುದುಗಿಸಿಕೊಂಡಿದ್ದರು. ಮೇಲ್ನೋಟಕ್ಕೆ ಅವರು ಸದಾ ಕೈಯಲ್ಲಿ ಕೊಡೆಯನ್ನು ತೂಗ ಹಾಕಿಕೊಂಡು ಒಬ್ಬಂಟಿಗನಾಗಿ ಬಹು ದೂರದ ನಡಿಗೆಗಳನ್ನು ಕೈಗೊಳ್ಳುವ ಒಬ್ಬ ವಿಚಿತ್ರ ವ್ಯಕ್ತಿಯಂತೆ ಕಾಣುತ್ತಿದ್ದರು.

ಥೋರೋ ಅವರು ಇಂದು, ಅಮೆರಿಕ ತನ್ನ ಇತಿಹಾಸದಲ್ಲಿ ನೀಡಿರುವ ಶ್ರೇಷ್ಠ ವಿದ್ವಾಂಸರುಗಳ ಸಾಲಿನಲ್ಲಿ ಅತ್ಯುನ್ನತ ಸ್ಥಾನಗಳಿಸಿದ್ದಾರೆ. ಅವರನ್ನು "ಪ್ರಕೃತಿ ಕವಿ" "ಸ್ವಾತಂತ್ರ್ಯ ತತ್ವಜ್ಞಾನಿ" ಮತ್ತು "ಉಗ್ರ ವ್ಯಕ್ತಿವಾದಿ" ಎಂದು ಪ್ರಶಂಸಿಸಲಾಗಿದೆ. ಥೋರೋ ಅವರು 1862ರಲ್ಲಿ ನಿಧನರಾದಾಗ ಎಮರ್ಸನ್ ಹೇಳಿದ ಮಾತುಗಳಿವು:

"ಥೋರೋ ಅವರಿಗಿಂತ ಹೆಚ್ಚು ನಿಜವಾದ ಅಮೆರಿಕನ್ ವ್ಯಕ್ತಿ ಇರಲಿಲ್ಲ.... ಅವರ ಆತ್ಮ ಉದಾತ್ತ ಸಮಾಜಕ್ಕಾಗಿ ಇತ್ತು....ಜ್ಞಾನ, ಪ್ರತಿಭೆ, ಸೌಂದರ್ಯ ಎಲ್ಲಿರುವುದೋ ಅಲ್ಲೆಲ್ಲ ಅವರು ತಮ್ಮ ಮನೆಯನ್ನು ಕಾಣುತ್ತಿದ್ದರು.

——

ನಿಧನ

ಮೂಲ್ಕಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳ್ತಮೊಕ್ತೇಸರರಾಗಿ, ದೇವಳದ ಸರ್ವತೋಮುಖ ಅಭಿವೃದ್ಧಿಗಾಗಿ ಅಹೋರಾತ್ರಿ ದುಡಿದ ಶ್ರೀ। ಎಂ. ದಯಾನಂದ ಶೆಟ್ಟಿ ಅವರು ತನ್ನ ನವಯುವ್ವನದಲ್ಲೇ ದೈವಾಧೀನರಾದರು. ——

ಪರ್ವತಗಳ ಪ್ರಭು—ನಿಕೋಲಸ್ ರೋರಿಚ್

ಸೌಂದರ್ಯದಲ್ಲಿ ನಾವು
ಒಂದಾಗಿ ಇರುತಿಹೆವು
ಸುಂದರತೆಯಿಂದಲೇ ನಮ್ಮ ಪ್ರಾರ್ಥನೆಯು
ಸೌಂದರ್ಯದಿಂದಲೇ ನಮ್ಮ ಗೆಲವು.

—ನಿಕೋಲಸ್ ರೋರಿಚ್.

ರಷಿಯನ್ ಸಂಜಾತ, ವಿಶ್ವವಿಖ್ಯಾತ ಕಲಾವಿದ ನಿಕೋಲಸ್ ರೋರಿಚ್ ಅವರ ಜನ್ಮ ಶತಾಬ್ದಿಯನ್ನು ಇದೇ ಅಕ್ಟೋಬರ್ 9ರಂದು ಆಚರಿಸಲಾಗುವುದು. ಸೈಬೀರಿಯದ ಅಲ್ತಾಯ್ ಪರ್ವತಶ್ರೇಣಿಗಳಲ್ಲಿನ ಎರಡನೆಯ ಅತ್ಯುನ್ನತ ಶಿಖರಕ್ಕೆ ಈ ಸಂದರ್ಭದಲ್ಲಿ "ನಿಕೋಲಸ್ ರೋರಿಚ್" ಅವರ ಹೆಸರನ್ನಿಡಲಾಗುವುದು. ಇದು ಜನ್ಮಶತಾಬ್ದಿಯ ಅಂಗವಾಗಿ ನಡೆಯಲಿರುವ ವಿಶೇಷ ಸಮಾರಂಭಗಳಲ್ಲಿ ಒಂದು.

ನಿಕೋಲಸ್ ರೋರಿಚ್ ಅವರದು ವೈವಿಧ್ಯಮಯ ಬದುಕು. ಅವರು ಕಲಾಪ್ರಪಂಚದ ಗುರು. ಲೇಖಕ, ಚಿತ್ರಗಾರ, ದಾರ್ಶನಿಕ, ಕವಿ, ಶೋಧಕ ಹಾಗೂ ಅನುಪಮ ಮಾನವತಾವಾದಿ.

ರೋರಿಚ್ ಅವರ ಜೀವನದ ಹಿರಿಮೆಯ ಬಗ್ಗೆ ಪ್ರಸ್ತಾವಿಸುತ್ತ ದಿ| ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರು, "ನಿಕೋಲಾಸ್ ರೋರಿಚ್ ಅವರ ಕಾರ್ಯಚಟುವಟಿಕೆಗಳ ಕ್ಷೇತ್ರವಿಸ್ತಾರವನ್ನೂ, ಅವರ ಸೃಜನಶೀಲ ಪ್ರತಿಭೆಯನ್ನೂ ಕಂಡು ನಾನು ತುಂಬ ಪ್ರಭಾವಿತನಾಗಿದ್ದೇನೆ" ಎಂದು ಹೇಳಿದ್ದಾರೆ.

ಅನಿಬಿಸೆಂಟರ ದೃಷ್ಟಿಯಲ್ಲಿ ನಿಕೋಲಾಸ್ ರೋರಿಚ್ ಓರ್ವ ಮೇರುವ್ಯಕ್ತಿತ್ವದ ಕಲಾವಿದ. ಅವಿತುಕೊಂಡಿರುವ ಪ್ರಕೃತಿಸೌಂದರ್ಯದ ಪ್ರದರ್ಶಕ. ಮೆಕ್ಸಿಂ ಗಾರ್ಕಿ ಈ ಕಲಾವಿದನನ್ನು, ಸಮಕಾಲೀನ ಜಗತ್ತಿನ ಅತ್ಯಂತ ವಿವೇಚನಾಶೀಲ ವ್ಯಕ್ತಿ ಎಂದು ಕರೆದಿದ್ದಾರೆ. ಈ ಮಹಾನ್ ಕಲಾವಿದ ತಮ್ಮ ಹಿಂದೆ 7000 ವರ್ಣಚಿತ್ರಗಳನ್ನು ಬಿಟ್ಟುಹೋಗಿದ್ದಾರೆ. ಇವುಗಳಲ್ಲಿ ಅನೇಕ ತೈಲಚಿತ್ರಗಳಿವೆ.

ಸೌಂದರ್ಯದ ಆರಾಧಕ

ನಿಕೋಲಾಸ್ ರೋರಿಚ್ ಅವರು ಸೌಂದರ್ಯವನ್ನು ಗಾಢವಾಗಿ ಆರಾಧಿಸುತಿದ್ದರು. ಕಲೆಯನ್ನು ಆಳವಾಗಿ ಪ್ರೀತಿಸುತಿದ್ದರು. ಅವರ ಈ ಗುಣವಿಶೇಷದಿಂದಾಗಿ ಅವರ ಕಲಾಕೃತಿಗಳು ಕಾಲದ ಇತಿಮಿತಿಗಳನ್ನು ದಾಟಿ ಅಮರವೆನಿಸಿವೆ. ಅವರು ತಮ್ಮದೇ ಆದ ಶೈಲಿಯನ್ನು ರೂಪಿಸಿದರು. ಲಿಯೋನಾರ್ಡೋ, ರೆಂಬ್ರಾಂಟ್, ಡ್ಯೂರರ್ ಮತ್ತು ಬ್ಲೇಕ್ ಇವರೇ ಮೊದಲಾದ ಕಲಾವಿದರಂತೆ ನಿಕೋಲಸ್ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಅವರ ಚಿತ್ರದ ಕುಂಚಿನಿಂದ ಮೂಡಿಬಂದ ಪ್ರತಿಯೊಂದು ವರ್ಣಚಿತ್ರ ಕೃತಿಯೂ ಹಿರಿಯ ಕಲಾಕೃತಿಯೆನಿಸಿತು. ಈ ಕಲಾಕೃತಿಗಳಲ್ಲಿ ವರ್ಣಗಳ ವೈವಿಧ್ಯದ ಮಿಡಿತವಿತ್ತು. ಪರಿಣಾಮ ಗಾಢವಾಗಿದ್ದಿತು. ಅವರ ಕಲಾಪ್ರಪಂಚ ಹಿಮಗಿರಿಯಷ್ಟೇ ಭವ್ಯವಾಗಿದ್ದಿತು.

ನಿಕೋಲಾಸ್ ರೋರಿಚ್ 1929ರಲ್ಲಿ ಪಂಜಾಬಿನ ಕಣಿವೆಯಲ್ಲಿ ನೆಲಸಿದ್ದರು. ಆಗ ಅವರಿಗೆ 54 ವಯಸ್ಸು. ಕಣ್ಮನಗಳನ್ನು ತಣಿಸುವ ಹಸಿರು ಹುಲ್ಲುಗಾವಲುಗಳು; ಬೆಳ್ಳಿಮೋಡಗಳ ಕಣ್ಣುಮುಚ್ಚಾಲೆಯ ನಿಸರ್ಗ ಸೌಂದರ್ಯದ ಮಡಿಲಲ್ಲಿ ದಮ್ಮ ಅಂತಿಮ ದಿನದ ವರೆಗೂ ಅಂದರೆ 1947ರ ವರೆಗೂ ಬದುಕು ಸಾಗಿಸಿದರು. ಭಾರತದ ಬಗ್ಗೆ ಅವರಿಗೆ ಅಗಾಧವಾದ ಮಮತೆಯಿದ್ದಿತು. ರಶಿಯದ ಪೀಟರ್ಸ್‌ಬರ್ಗ್‌ನಲ್ಲಿರುವ "ಈಶ್ವರ" ಎಸ್ಟೇಟ್‌ನಲ್ಲಿ ಬಾಲ್ಯದ ದಿನಗಳನ್ನು ಕಳೆದಾಗಿನಿಂದಲೂ ಈ ಬಾಂಧವ್ಯ ಬೆಳೆದುಬಂದಿತು.

ತಮ್ಮ 31ನೆಯ ವಯಸ್ಸಿನ ನಂತರ ಅವರು ಭಾರತದ ಬಗ್ಗೆ ಅನೇಕ ಕಲಾಕೃತಿಗಳನ್ನೂ ಪ್ರಬಂಧಗಳನ್ನೂ ಬರೆದರು. ಶ್ರೀಕೃಷ್ಣ, ಲಕ್ಷ್ಮಿ, ದೇವಸರಿ, ದಮಯಂತಿ ಇವರೇ ಮೊದಲಾದವರ ಕುರಿತು ಕೃತಿ ರಚಿಸಿದರು. ಅವರ ಭಾರತದ ಸ್ವಪ್ನ-ಮಾಲಿಕೆ ಕಲಾಪ್ರಪಂಚದ ಇನ್ನೊಂದು ಹಿರಿಮೆ.

ಓಂಕಾರ ನಾದದ ಹಿರಿಮೆ

ಭಾರತದ ಧರ್ಮಮಾರ್ಗ ಮತ್ತು ಗಾಯತ್ರಿ ಕುರಿತು ನಿಕೊಲಾಸ್ ರೋರಿಚ್ ಪ್ರಬಂಧಗಳನ್ನು ರಚಿಸಿದರು. ಅವರು ತಮ್ಮ 'ಅಲ್ತಾಯ್ ಹಿಮಾಲಯ' ಎಂಬ ಗ್ರಂಥದಲ್ಲಿ "ಭಾರತ! ನಿನ್ನ ಮಧುರ ಸುವಾಸನೆಯ ಸತ್ಯವನ್ನು ಬಲ್ಲೆವು. ನಿನ್ನ ವಿಚಾರಧಾರೆಯ ಸಮಂಜಸತೆಯನ್ನೂ ಆಳವನ್ನೂ ಅರಿತಿರುವೆವು. ಓಂಕಾರ ನಾದದ ಮಹತಿಯನ್ನು ಅದು ನಮ್ಮನ್ನು ಬಣ್ಣಿಸಲಾಗದ ಎತ್ತರಕ್ಕೆ ಬಹು ಎತ್ತರಕ್ಕೆ—ಕೊಂಡೊಯ್ಯುವುದೆಂಬುದನ್ನು ನಾವು ತಿಳಿದಿರುವೆವು. ಭಾರತ! ನಿನ್ನ ಪ್ರಾಚೀನ ಬೌದ್ಧಿಕ ಪರಂಪರೆಯ ಖ್ಯಾತಿಯನ್ನು ನಾವು ಬಲ್ಲೆವು" ಎಂದು ಬರೆದಿದ್ದಾರೆ.

ಭಾರತದಿಂದಲೇ ಅವರು 1923ರಲ್ಲಿ ಮಧ್ಯ ಏಷ್ಯಾಕ್ಕೆ ತಮ್ಮ ಖ್ಯಾತ 'ರೋರಿಚ್ ಪಯಣ'ವನ್ನು ಆರಂಭಿಸಿದರು. ಐದು ವರ್ಷಗಳ ವರೆಗೆ ಪ್ರವಾಸಮಾಡಿ, ಟಿಬೆಟ್, ಸಿಕ್ಕಿಂ, ಮಂಗೋಲಿಯ, ಚೀನ, ಟರ್ಕಿಸ್ತಾನ್ ಮತ್ತು ಸೈಬೀರಿಯಾದಲ್ಲಿ ಅಲ್ತಾಯ್ ಪ್ರದೇಶಗಳನ್ನು ಸಂದರ್ಶಿಸಿದರು. ಹಿಮಾಲಯದ ಶೋಧವೇ ಅವರ ಗುರಿಯಾಗಿತ್ತು.

ಬೌದ್ಧಿಕವಾಗಿ ಪ್ರಚೋದಕವಾದ ಶ್ರಮಸಾಧ್ಯವಾದ ಈ ಪ್ರವಾಸವನ್ನು ಪೂರೈಸಿಕೊಂಡು 1929ರಲ್ಲಿ ಕುಲು ಕಣಿವೆಯ ಮಡಿಲಿಗೆ ಮರಳಿ ಬಂದು ಅಲ್ಲಿಯೇ ನೆಲೆಸಿದರು. ಶೋಧನೆಯ ಫಲಶ್ರುತಿಯ ಅಧ್ಯಯನಕ್ಕಾಗಿ ಅವರು ಅಲ್ಲಿಯೇ ಉರುಸ್ವತಿ ಹಿಮಾಲಯ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದರು. 6500 ಅಡಿಗಳಷ್ಟು ಎತ್ತರವಾಗಿರುವ ಪರ್ವತಶ್ರೇಣಿಗಳ ಮಧ್ಯ ಸ್ಥಾಪಿಸಲಾಗಿರುವ ಈ ಸಂಸ್ಥೆಯಲ್ಲಿ ಎರಡು ವಿಭಾಗಗಳಿವೆ. ಮೊದಲನೆಯದು ವನಸಂಪತ್ತಿನ ವಿಭಾಗ. ಎರಡನೆಯದು ಭಾಷಾ ಹಾಗೂ ಮಾನವಕುಲ ಶಾಸ್ತ್ರದ ವಿಭಾಗ. ಇವೇ ಆ ಎರಡು ವಿಭಾಗಗಳು.

ಬೇಸಿಗೆಕಾಲದಲ್ಲಿ ಪರ್ವತದ ಕಣಿವೆಗಳಲ್ಲಿ ಹಿಮಕರಗಿ ಸಂಚಾರ ಆರಂಭವಾದಾಗ, ನಿಕೋಲಾಸ್ ಅವರ ಸಂಶೋಧನಾ ಸಂಸ್ಥೆಯ ಶೋಧಕರ ತಂಡಗಳು ಟಿಬೆಟ್ ಹಾಗೂ ಹಿಮಾಲಯದ ನಾನಾ ಪರ್ವತಪಂಕ್ತಿಗಳ ಕಡೆಗೂ ಹೋಗುತಿದ್ದರು. ಅಕ್ಟೋಬರ್ ಹೊತ್ತಿಗೆ ಕುಲು ಕಣಿವೆಗೆ ವಾಪಸಾಗುತಿದ್ದರು.

ನಿಕೋಲಾಸ್ ರೋರಿಚ್ ಅವರು ಹಿಮಾಲಯದ ಬಗ್ಗೆ ರಚಿಸಿರುವ ವರ್ಣಚಿತ್ರಗಳಲ್ಲಿ ಭವ್ಯವಾದ ಹಿಮಾಲಯ ಪರ್ವತಶ್ರೇಣಿ, ಮಾನವ ಹಾಗೂ ವಿಶ್ವದ ನಡುವಣ ಸಂಬಂಧವನ್ನು ಕುರಿತು ಕಲಾವಿದನ ಕಲ್ಪನೆಯ ಮೂರ್ತರೂಪ. ನೆಹರೂ ಅವರು ಈ ಕೃತಿಗಳ ಬಗ್ಗೆ ಪ್ರಸ್ತಾಪಿಸುತ್ತ "ಈ ಕಲಾಕೃತಿಗಳು ನಮ್ಮ ಇತಿಹಾಸ, ನಮ್ಮ ವಿಚಾರಧಾರೆ, ನಮ್ಮ ಸಾಂಸ್ಕೃತಿಕ ಹಾಗೂ ಅಧ್ಯಾತ್ಮಿಕ ಪರಂಪರೆಯನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ. ಈ ಕಲಾಕೃತಿಗಳಲ್ಲಿ ಭಾರತದ ಭವ್ಯತೆಯನ್ನು ಸೆರೆಹಿಡಿದು ನಿಲ್ಲಿಸಿರುವ ಹಿರಿಯ ಕಲಾವಿದ ರೋರಿಚ್ ಅವರಿಗೆ ನಾವು ಚಿರಋಣಿ" ಎಂದು ಹೇಳಿದ್ದಾರೆ.

ರೋರಿಚ್ ಅವರ ಹಿಮಾಲಯ ಭವ್ಯವಾದದ್ದು, ನಿಗೂಢವಾದದ್ದು. ನಿಕೋಲಾಸ್ ರೋರಿಚ್ ಅವರ ಮಗ ಸ್ವೆಟೋಸ್ಲಾವ್ ರೋರಿಚ್. ಅವರೂ ಸಹ ತಂದೆಯಂತೆ, ಸುಪ್ರಸಿದ್ಧ ಕಲಾವಿದ. ತಮ್ಮ ತಂದೆಯ ಕಲಾಕೃತಿಗಳ ಬಗ್ಗೆ ಪ್ರಸ್ತಾಪಿಸುತ್ತ, "ಹಿಮಾಲಯ ಮಾಲಿಕೆಯ ವರ್ಣಚಿತ್ರಗಳ ಮೂಲಕ ನಿಕೋಲಸ್ ರೋರಿಚ್; ಜ್ಞಾನಾರ್ಜನೆಗಾಗಿ ಹಿಮಗಿರಿಗೆ ಬಂದ ಅಸಂಖ್ಯಾತ ಸತ್ಯಶೋಧಕರಿಗೆ ಸಂಬಂಧಿಸಿದ ದಂತಕತೆಗಳು ಹಾಗೂ ಅಧ್ಯಾತ್ಮಿಕ ಆಸೆ-ಆಕಾಂಕ್ಷೆಗಳನ್ನು ತಿಳಿಯಪಡಿಸಿದರು. ನಿಕೊಲಾಸ್ ರೋರಿಚ್ ಅವರ ವರ್ಣಚಿತ್ರಗಳಲ್ಲಿನ ವರ್ಣವೈವಿಧ್ಯ, ಸೌಂದರ್ಯ ಹಾಗೂ ಸ್ಪಂದನೆ ಅವರಿಗೆ "ಪರ್ವತಗಳ ಪ್ರಭು" ಎಂದು ಖ್ಯಾತಿಯನ್ನು ತಂದುಕೊಟ್ಟಿದೆ ಎಂದಿದ್ದಾರೆ.

ಸಾಂಸ್ಕೃತಿಕ ರಾಯಭಾರಿ

1920ರಲ್ಲಿ ನಿಕೋಲಾಸ್ ಅಮೆರಿಕವೂ ಸೇರಿದಂತೆ ವಿಶ್ವದ ಅನೇಕ ಪ್ರಮುಖ ಕೇಂದ್ರಗಳಲ್ಲಿ ಸಾಂಸ್ಕೃತಿಕ ಸಂಘಗಳನ್ನು ಸ್ಥಾಪಿಸಿದರು. ಅನೇಕ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಸಂಸ್ಥೆಗಳೊಂದಿಗೆ ಅವರು ಸಂಬಂಧಹೊಂದಿದ್ದರು.

ರಸಿಯದಲ್ಲಿ ಕಲೆಗಳಿಗೆ ಉತ್ತೇಜನ ನೀಡುವ ಇಂಪೀರಿಯಲ್ ಸೊಸೈಟಿಯ ಮುಖ್ಯಸ್ಥರಾಗಿದ್ದರು. ಅಲ್ಲದೇ ವರ್ಲ್ಡ್ ಆರ್ಟ್ ಸೊಸೈಟಿಯ ಪ್ರಥಮ ಅಧ್ಯಕ್ಷರಾದರು.

ಮೊದಲ ವಿಶ್ವಸಮರದ ನಂತರ ನಿಕೋಲಾಸ್ ಕಲಾಕೃತಿಗಳ ಹಾಗೂ ಸೌಂದರ್ಯದ ಸಂದೇಶದ ಮೂಲಕ ಅಂತಾರಾಷ್ಟ್ರೀಯ ಶಾಂತಿ ಸಾಧಿಸುವ ಕನಸು ಕಂಡರು.

"ಕಲೆಯು ಸೌಂದರ್ಯದ ಸೃಷ್ಟಿಗಾಗಿ" ಎಂದು ನುಡಿದ ಅವರು, "ಸೌಂದರ್ಯದಿಂದ ನಾವು ವಿಜಯ ಗಳಿಸುವೆವು — ಸೌಂದರ್ಯದಿಂದ ನಾವು ಒಂದಾಗುವೆವು—ಸೌಂದರ್ಯದ ಮೂಲಕವೇ ನಾವು ಪ್ರಾರ್ಥಿಸುವೆವು" ಎಂದು ಹೇಳಿದ್ದಾರೆ. ಯುದ್ಧಕಾಲದಲ್ಲಿ ಕಲಾಸಂಪತ್ತಿನ ರಕ್ಷಣೆಗಾಗಿ ನಿಕೋಲಾಸ್, ಪ್ರಸಿದ್ಧ "ರೋರಿಚ್ ಒಪ್ಪಂದ" ಹಾಗೂ ಶಾಂತಿ ಕರಾರಿಗೆ ಕಾರಣರಾದರು. ಈ ಒಪ್ಪಂದದ ಪ್ರಕಾರ ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ವೈಜ್ಞಾನಿಕ ಸಂಸ್ಥೆಗಳು, ಅಲ್ಲದೇ ಸಾಂಸ್ಕೃತಿಕ ಮಹಾತ್ಮೆಯ ಕೇಂದ್ರಗಳು ಅನುಲ್ಲಂಘನೀಯ ಎಂದು ಪರಿಗಣಿಸಲಾಯಿತು. 1935ರ ಏಪ್ರಿಲ್ 15ರಂದು ವಾಶಿಂಗ್ಟನ್ನಿನ ಶ್ವೇತಭವನದಲ್ಲಿ ಈ ಒಪ್ಪಂದಕ್ಕೆ ಸಹಿಹಾಕಲಾಯಿತು. ಉತ್ತರ, ಮಧ್ಯ, ದಕ್ಷಿಣ ಅಮೆರಿಕದ 21 ಸರ್ಕಾರಗಳ ಪ್ರತಿನಿಧಿಗಳು ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಅಂಕಿತಹಾಕಿದರು. ಈ ಶಾಂತಿಯ ಕರಾರಿಗೆ ಇಡೀ ವಿಶ್ವವೇ ಒಳಪಟ್ಟಾಗ ಯುದ್ಧಕ್ಕೆ ಅವಕಾಶವೇ ಇರದು ಎಂದು ಹೇಳಿದರು.

ಈ ಸುಪ್ರಸಿದ್ಧ ಕಲಾವಿದರ ಸ್ಮರಣಾರ್ಥವಾಗಿ ವಾರಣಾಸಿಯ ಕಲಾಭವನದಲ್ಲಿ ಹಾಗೂ ಅಲಹಾಬಾದಿನ ಮುನಿಸಿಪಲ್ ವಸ್ತುಸಂಗ್ರಹಾಲಯದಲ್ಲಿ ವಿಶೇಷ ಭವನಗಳನ್ನು ನಿರ್ಮಿಸಲಾಗಿದೆ. ಕಲಕತ್ತಾದ ಬೋಸ್ ಇನ್‌ಸ್ಟಿಟ್ಯೂಟ್, ಮದ್ರಾಸಿನ ಅಡ್ಯಾರ್ ಮ್ಯೂಸಿಯಂ, ತಿರುವನಂತಪುರದ ಶ್ರೀ ಚಿತ್ರಾಲಯಂ ಆರ್ಟ್ ಗ್ಯಾಲರಿ ಹಾಗೂ ಶಾಂತಿನಿಕೇತನದ ಟ್ಯಾಗೊರ್ ಕಲಾಕೇಂದ್ರದಲ್ಲಿ ನಿಕೋಲಾಸ್ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ, ಅನೇಕ ಸರ್ಕಾರಿ ವಸ್ತುಸಂಗ್ರಹಾಲಯಗಳಲ್ಲಿ ಅವುಗಳನ್ನು ಇಡಲಾಗಿದೆ.

ಲೆನಿನ್‌ಗ್ರಾಡಿನ ಬಳಿ ಇರುವ ನಿಕೊಲಾಸ್ ರೋರಿಚ್ ಅವರ ನಿವಾಸವಾದ "ಈಶ್ವರ" ಗೃಹವನ್ನು ಸ್ಮಾರಕ ಮ್ಯೂಸಿಯಂ ಆಗಿ ಪರಿವರ್ತಿಸುವುದು, ನಿಕೋಲಾಸ್ ಗ್ರಂಥಗಳ ಪ್ರಕಟಣೆ ಹಾಗೂ ಅವರ ಜೀವನ ಸಾಧನೆ ಕುರಿತ ಚಲನಚಿತ್ರ ತಯಾರಿಕೆ ಇತ್ಯಾದಿ ರಷ್ಯಾದ ಶತಾಬ್ದಿ ಉತ್ಸವಗಳಲ್ಲಿ ಸೇರಿವೆ. ಭಾರತವೂ ಸಹ ಈ ಸಂದರ್ಭದಲ್ಲಿ ರೋರಿಚ್ ಅವರ ಸ್ಮರಣಾರ್ಥ ವಿಶೇಷ ಅಂಚೆಚೀಟಿ ಪ್ರಕಟಿಸಿದೆ.

ನಿಕೋಲಾಸ್ ರೋರಿಚ್ ಸಕಲ ಮಾನವ ಜನಾಂಗವನ್ನು ಪ್ರೀತಿಸುತಿದ್ದರು. ಅವರ ಮಗ ಹೇಳುವಂತೆ "ನಿಕೋಲಾಸ್ ಇಡೀ ವಿಶ್ವಕ್ಕೆ ಸೇರಿದವರು. ಮಾನವ ಜನಾಂಗದ ಪ್ರತಿಯೊಂದು ಕುಲವೂ ಅವರಿಗೆ ಸೋದರ ಕುಲ. ಪ್ರತಿಯೊಂದು ರಾಷ್ಟ್ರವೂ ಅವರ ದೃಷ್ಟಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿತ್ತು. ಪ್ರತಿಯೊಂದು ಧರ್ಮವೂ ಅಂತಿಮ ಗುರಿಸಾಧನೆಯ ಮಾರ್ಗವಾಗಿತ್ತು. ಜೀವನವು, ಭವಿಷ್ಯದ ಕಡೆಗೆ ಕೊಂಡೊಯ್ಯುವ ಹೆಬ್ಬಾಗಿಲು. ನಿಕೋಲಾಸ್ ರೋರಿಚ್ ಅವರ ಜೀವನವೇ ಸೌಂದರ್ಯ, ಸಾಮರಸ್ಯ ಹಾಗೂ ಶಾಂತಿ ಸಂದೇಶವಾಗಿತ್ತು.

—o—

ಮರೆಯಲಾಗದ ಮೈಸೂರು ಮಹಾರಾಜರು

"ಕರ್ಣಾಟಕದಲ್ಲಿ ಹುಟ್ಟಿದ ರಾಜರುಗಳಲ್ಲಿ ಅಪೂರ್ವವಾದ ಗುಣಸಂಪತ್ತುಳ್ಳವರಾಗಿದ್ದರು."

● ಬಿ. ಶಿವಮೂರ್ತಿ ಶಾಸ್ತ್ರೀ.

ಕರ್ನಾಟಕದ ಅತ್ಯಂತ ಪ್ರಾಚೀನ ರಾಜ ಮನೆತನವಾದ ಮೈಸೂರು ರಾಜ್ಯದ ಕಟ್ಟಕಡೆಯ ಪಟ್ಟಾಭಿಷಿಕ್ತ ಮಹಾರಾಜರೂ ಕರ್ನಾಟಕ ರತ್ನಸಿಂಹಾಸನಾಧೀಶ್ವರರೂ ವಿದ್ಯಾವಿನಯಸಂಪನ್ನರೂ ಅಸಾಧಾರಣ ಗುಣಸಂಪತ್ತುಗಳುಳ್ಳವರೂ ರಾಜರಾಗಿ ಆಳಿದರೂ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ರಾಜ್ಯದ ಒಬ್ಬ ಸಾಮಾನ್ಯ ಪ್ರಜೆಯಂತೆ ಇದ್ದು ತಮ್ಮ ಅಪಾರ ಸದ್ಗುಣಗಳಿಂದ ಮೂರು ಕೋಟಿ ಕನ್ನಡಿಗರ ಹೃದಯ ಸಿಂಹಾಸನವನ್ನು ಅಲಂಕರಿಸಿದವರೂ ಆದ ಶ್ರೀ ಜಯಚಾಮರಾಜ ಒಡೆಯರು ತಮ್ಮ ೫೫ನೆಯ ವಯಸ್ಸಿನಲ್ಲಿ ದಿನಾಂಕ ೨೩-೯-೧೯೭೪ರಂದು ಬೆಂಗಳೂರು ಅರಮನೆಯಲ್ಲಿ ಅನಿರೀಕ್ಷಿತವಾಗಿ ತಮ್ಮ ಭೌತಿಕ ದೇಹವನ್ನು ಉಳಿದು ಪರಮೇಶ್ವರನ ಪಾದಾರವಿಂದವನ್ನು ಸೇರಿದರೆಂಬ ವಾರ್ತೆ ಬರಸಿಡಿಲಿನಂತೆ ಬಂದಿತು.

ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ಆಳಿದ ಮಹಾ ಪ್ರಭು ಶ್ರೀ ಚಾಮರಾಜ ಒಡೆಯ ಪೌತ್ರರು, ಯುವರಾಜ ಕಂಠೀರವ ನರಸಿಂಹರಾಜ ಒಡೆಯರ ಪುತ್ರರು. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಔರಸಪುತ್ರರು ಇಲ್ಲವಾದ್ದರಿಂದ ಅವರ ಸಹೋದರರ ಪುತ್ರರಾದ ಶ್ರೀ ಜಯಚಾಮರಾಜ ಒಡೆಯರು ಸಿಂಹಾಸನಕ್ಕೆ ಹಕ್ಕುದಾರರಾದರು. ಇವರು ಬಾಲ್ಯದಿಂದ ಅವರ ಪೂಜ್ಯ ದೊಡ್ಡಪ್ಪನವರ ಮೇಲ್ವಿಚಾರಣೆಯಲ್ಲಿ ಶ್ರದ್ಧೆಯಿಂದ ವಿದ್ಯಾಭ್ಯಾಸಮಾಡಿ ಮೈಸೂರು ವಿಶ್ವವಿದ್ಯಾನಿಲಯದ ಬಿ. ಎ. ಪದವೀಧರರಾದರು. ಅಲ್ಲದೆ ತಮ್ಮ ವಿಶೇಷ ಸಂಸ್ಕಾರದಿಂದ ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ ಮೊದಲಾದ ಭಾಷೆಗಳಲ್ಲಿಯೂ ಸಂಗೀತ, ಸಾಹಿತ್ಯ, ವೇದಶಾಸ್ತ್ರ ಪುರಾಣಗಳಲ್ಲಿಯೂ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಧರ್ಮಶಾಸ್ತ್ರ ಮೊದಲಾದವುಗಳಲ್ಲಿಯೂ ಅಸಾಧಾರಣ ಪಾಂಡಿತ್ಯವನ್ನು ಸಂಪಾದಿಸಿದರು. ಕ್ರೀಡೆಗಳಲ್ಲಿಯೂ ಬೇಟೆಯಲ್ಲಿಯೂ ಇವರಿಗಿದ್ದ ಅಭಿರುಚಿ ಮತ್ತು ಪಾಂಡಿತ್ಯ ವಿಜಕ್ಕೂ ಕ್ಷತ್ರಿಯೋಚಿತವಾಗಿತ್ತು.

ಶ್ರೀ ಜಯಚಾಮರಾಜ ಒಡೆಯರು ಜನ್ಮತಃ ದೇವತಾವರ್ಗಕ್ಕೆ ಸೇರಿದವರು. ಧೈರ್ಯ, ಸ್ಥೈರ್ಯ, ಔದಾರ್ಯ, ಗಾಂಭೀರ್ಯ, ದೈವಭಕ್ತಿ, ದಯೆ, ದಾಕ್ಷಿಣ್ಯ ಮೊದಲಾದ ಮಾನವತಾ ಗುಣಗಳಿಂದ ಕೂಡಿದವರು. 'ಭಕ್ತಿಗೆ ಈಶ್ವರನ ತಲೆದೂಗಿಸುವುದವಧಿ' ಎಂಬ ರಾಘವಾಂಕನ ಮಾತು ಇವರಲ್ಲಿ ಅನ್ವರ್ಥವಾಗುತಿತ್ತು. ಬೇಡಲು ಬಂದವರಿಗೆ ಇನ್ನು ನನಗೆ ಸಾಕು ಎಂಬಷ್ಟು ಧನ, ಕನಕಗಳನ್ನು ಕೊಟ್ಟು ತೃಪ್ತಿಪಡಿಸುವುದು ಇವರ ಹುಟ್ಟುಗುಣ. ಇವರ ಪುಸ್ತಕಭಂಡಾರವು ಹಲವಾರು ಲಕ್ಷ ರೂ.ಗಳಷ್ಟು ಬೆಲೆಬಾಳುವಷ್ಟು ದೊಡ್ಡದು. ಜಯಚಾಮರಾಜ ಒಡೆಯರ ದೇಹದ ಗಾತ್ರವೂ ದೊಡ್ಡದು. ಅದಕ್ಕೆ ಅನುಗುಣವಾಗಿ ಅವರಿಗಿದ್ದ ಮನಸ್ಸು, ಬುದ್ಧಿ, ಪ್ರತಿಭೆ, ಅಂತಃಕರಣ ಮೊದಲಾದವುಗಳೂ ಅಷ್ಟೇ ದೊಡ್ಡವು. "ಆಕಾರ ಸದೃಶಪ್ರಜ್ಞಾ ಪ್ರಜ್ಞಯಾ ಸದೃಶಾಗಮಃ" ಎಂಬ ಮಹಾಕವಿ ಕಾಳಿದಾಸನ ಮಾತು ಇವರಲ್ಲಿ ಪೂರ್ಣವಾಗಿ ಅನ್ವಯವಾಗುವಂತಿತ್ತು. ಒಟ್ಟಿನಲ್ಲಿ ಶ್ರೀ ಜಯಚಾಮರಾಜ ಒಡೆಯರು ಕರ್ಣಾಟಕದಲ್ಲಿ ಹುಟ್ಟಿದ ರಾಜರುಗಳಲ್ಲಿ ಅಪೂರ್ವವಾದ ಗುಣಸಂಪತ್ತು ಉಳ್ಳವರು ಎಂದು ಹೇಳಬಹುದು. ಇವರನ್ನು ನೋಡಿದಾಗ ತತ್ವಜ್ಞಾನಿ ಜನಕ, ರಾಜರ್ಷಿ ಅಶೋಕ, ವಿದ್ವತ್ಪ್ರಭು ಭೋಜರಾಜ, ಕಲ್ಯಾಣದ ಚಾಲುಕ್ಯ ವಿಕ್ರಮ, ವಿಜಯನಗರದ ಕೃಷ್ಣದೇವರಾಯ ಮೊದಲಾದವರು ನಮ್ಮ ನೆನಪಿಗೆ ಬರುತಿದ್ದರು.

ಶ್ರೀ ಜಯಚಾಮರಾಜ ಒಡೆಯರು ತಮ್ಮ ಪೂರ್ವಿಕರಾದ ಮುಮ್ಮಡಿ ಮತ್ತು ನಾಲ್ವಡಿ ಪ್ರಭುಗಳಂತೆ ಅಪೂರ್ವವಾದ ದೈವಭಕ್ತಿ ಸಂಪತ್ತುಳ್ಳವರು. ಅವರ ಮನೆದೇವತೆ, ಶ್ರೀಕಂಠ-ಚಾಮುಂಡಾಂಬೆಯರು. ಅವರು ಕರ್ಣಾಟಕದ ಹಂಪೆ, ಗೋಕರ್ಣ, ಉಡುಪಿ, ಶೃಂಗೇರಿ, ಧರ್ಮಸ್ಥಳ, ಮಂತ್ರಾಲಯ, ಮಾದೇಶ್ವರ, ಎಡೆಯೂರು, ಗುಬ್ಬಿ, ಕಲ್ಬುರ್ಗಿ, ಕಲ್ಯಾಣ, ಸೊಲ್ಲಾಪುರ, ಶಿವಯೋಗಮಂದಿರ, ಸಿದ್ಧಗಂಗೆ, ಶಿವಗಂಗೆ, ಶಿವನಸಮುದ್ರ ಮೇಲ್ಕೋಟೆ, ಹರಿಹರ, ಕೊಲ್ಲೂರು, ಶ್ರವಣಬೆಳಗೊಳ ಮೊದಲಾದ ಎಲ್ಲ ಕ್ಷೇತ್ರಗಳನ್ನೂ ಸಂದರ್ಶಿಸಿದ್ದಾರೆ. ಭಾರತದ ಸುಕ್ಷೇತ್ರಗಳಾದ ಕಾಶಿ, ರಾಮೇಶ್ವರ, ಶ್ರೀಶೈಲ, ಪ್ರಯಾಗ, ಹರಿದ್ವಾರ, ಋಷಿಕೇಶ, ಕನ್ಯಾಕುಮಾರಿ, ಶ್ರೀರಂಗ, ತಿರುಪತಿ, ತಿರುವನಂತಪುರ, ಪಳನಿ, ಶ್ರೀರಂಗ, ಸುಬ್ರಹ್ಮಣ್ಯ, ದ್ವಾರಕ ಮೊದಲಾದ ಎಲ್ಲ ಕ್ಷೇತ್ರಗಳಲ್ಲೂ ಸಂಚರಿಸಿದ್ದಾರೆ. ಗಂಗಾ ಯಮುನಾ, ಗೋದಾವರಿ, ಕೃಷ್ಣಾ, ಕಾವೇರಿ ಮೊದಲಾದ ಎಲ್ಲ ತೀರ್ಥಗಳಲ್ಲಿ ಸ್ನಾನಮಾಡಿದ್ದಾರೆ. ಈ ತೀರ್ಥ ಕ್ಷೇತ್ರ ಸಂಚಾರವೂ ಅವರು ಅಲ್ಲಿ ಮಾಡಿದ ದಾನಧರ್ಮಗಳೂ ಅವರ ಆಸ್ತಿಕ್ಯಬುದ್ಧಿಗೆ ಒಳ್ಳೆಯ ನಿದರ್ಶನಗಳಾಗಿವೆ. ಮೈಸೂರು ಜಿಲ್ಲೆಯ ಮಹಾದೇಶ್ವರ ಕ್ಷೇತ್ರಕ್ಕೆ ನಮ್ಮ ಮಹಾರಾಜರು ಅವರ ಮನೆತನದವರು ಮಾಡಿರುವ ಸೇವೆಯು ಅಪಾರವಾದುದು. ಮಾದೇಶ್ವರ ಬೆಟ್ಟಕ್ಕೆ ಮಾರ್ಗ ರಚನೆಮಾಡಿಸಿದುದು, ಆ ಕ್ಷೇತ್ರದಲ್ಲಿ ಧರ್ಮಶಾಲೆಯನ್ನು ಕಟ್ಟಿಸಿದುದು, ಕ್ಷೇತ್ರಕ್ಕೆ ಬರುವ ಯಾತ್ರಿಕರ ಸೌಕರ್ಯಕ್ಕಾಗಿ ನೀರು ಮತ್ತು ದೀಪದ ಸೌಕರ್ಯ ಮಾಡಿಸಿದುದು, ಆ ಕ್ಷೇತ್ರದ ಸ್ಥಳಪುರಾಣವನ್ನು ಬರೆಸಿ ಪ್ರಕಟಿಸಿದುದು ಇದಕ್ಕೆಲ್ಲಾ ಶ್ರೀ ಜಯಚಾಮರಾಜ ಒಡೆಯರೇ ಬಹುಮಟ್ಟಿಗೆ ಕಾರಣರಾಗಿದ್ದಾರೆ.

ಮೈಸೂರಿನ ಶ್ರೀಮನ್ಮಹಾರಾಜರು ಅವರ ಪೂಜ್ಯ ತಂದೆಯವರಾದ ಕೀರ್ತಿಶೇಷ ನರಸಿಂಹರಾಜ ಒಡೆಯರಂತೆ ವಿಶ್ವವಿಹಾರಿಗಳು. ಇಂಗ್ಲೆಂಡ್, ಅಮೆರಿಕಾ, ಕೆನಡ, ಫ್ರಾನ್ಸ್, ಜರ್ಮನಿ, ಇಟಲಿ, ಈಜಿಪ್ಟ್, ಜಪಾನ್, ಸಿಂಗಪೂರ್, ಸಯಾಂ, ಇಂಡೋಚೀನ ಮೊದಲಾದ ವಿಶ್ವದ ಪೂರ್ವ-ಪಶ್ಚಿಮ ರಾಷ್ಟ್ರಗಳಲ್ಲೆಲ್ಲಾ ಸಂಚಾರ ಮಾಡಿ ಅಪಾರವಾದ ಜ್ಞಾನಾನುಭವಗಳನ್ನು ಅವರು ಸಂಪಾದಿಸಿದ್ದರು. "ಕೋಶ ಓದು, ದೇಶ ನೋಡು" ಎಂಬ ಮಾತಿನ ಅರ್ಥವನ್ನು ಅವರು ತಿಳಿದಿದ್ದರು. ಪ್ರಪಂಚದ ದೊಡ್ಡ ದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ತತ್ವಜ್ಞಾನ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ವಿಚಾರಪೂರ್ಣವಾದ ಹಾಗೂ ವಿದ್ವತ್ಪೂರ್ಣವಾದ ಭಾಷಣಗಳನ್ನು ಮಾಡುತಿದ್ದರು. ಸಂಚರಿಸುವ ಜ್ಞಾನಭಂಡಾರದಂತಿದ್ದ ಶ್ರೀ ಜಯಚಾಮರಾಜ ಒಡೆಯರ ಇಂಗ್ಲಿಷ್, ಕನ್ನಡ ಭಾಷಣಗಳನ್ನೆಲ್ಲಾ ಸಂಗ್ರಹಿಸಿ ಮುದ್ರಿಸಿ ಪ್ರಕಟಿಸಿದರೆ ನಮ್ಮ ಸಾಹಿತ್ಯ ಪ್ರಪಂಚಕ್ಕೆ ಅದರಿಂದ ಮಹೋಪಕಾರವಾಗುತ್ತದೆ. ಮಹಾನುಭಾವರಾದ ಶ್ರೀ ಜಯಚಾಮರಾಜ ಒಡೆಯರು ಇಂಗ್ಲಿಷ್‌ನಲ್ಲಿ 'ದತ್ತಾತ್ರೇಯ'ವೆಂಬ ಗ್ರಂಥವನ್ನು ಬರೆದಿದ್ದಾರೆ. ಸುಮಾರು 90 ಸಂಗೀತ ಕೃತಿಗಳನ್ನು ರಚಿಸಿ ವಾಗ್ಗೇಯಕಾರರಾಗಿದ್ದಾರೆ. ಪಾಶ್ಚಾತ್ಯ ಸಂಗೀತದಲ್ಲೂ ಅವರು ಪ್ರವೀಣರು.

ವೇದಶಾಸ್ತ್ರ ಪುರಾಣಗಳನ್ನೆಲ್ಲಾ ತಮ್ಮ ಆಸ್ಥಾನ ಪಂಡಿತರಿಂದ ಟೀಕೆ, ಟಿಪ್ಪಣಿಗಳನ್ನು ಬರೆಸಿ ಕನ್ನಡಕ್ಕೆ ಅನುವಾದಮಾಡಿಸಿದ್ದಾರೆ. ಅದಕ್ಕಾಗಿ ಲಕ್ಷಗಟ್ಟಲೆ ಹಣ ವೆಚ್ಚಮಾಡಿದ್ದಾರೆ. ಪ್ರಾಯೇಣ ಈ ಮಹಾಕಾರ್ಯವನ್ನು ಕರ್ಣಾಟಕದ ಯಾವ ರಾಜಮಹಾರಾಜರೂ ಮಾಡಿಲ್ಲವೆಂದು ಹೇಳಬಹುದು. ಕರ್ಣಾಟಕದ ಸರಸ್ವತೀ ಮಂದಿರವೆನಿಸಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ಶ್ರೀ ಜಯಚಾಮರಾಜ ಒಡೆಯರೂ ಅವರ ಪೂಜ್ಯಪಿತೃ ನರಸಿಂಹರಾಜ ಒಡೆಯರೂ ಅವರ ಪೂಜ್ಯ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರೂ ಪೋಷಕರಾಗಿ, ಅಧ್ಯಕ್ಷರಾಗಿ, ಉದಾರ ಸಹಾಯಮಾಡಿದ್ದಾರೆ. ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಉದ್ಧಾರಕರೆಂದು ಹೇಳಬಹುದು. ಬಳ್ಳಾರಿ ಸಾಹಿತ್ಯ ಸಮ್ಮೇಳನದ ಉದ್ಘಾಟಕರಾಗಿ ಅಮೋಘವಾದ ಭಾಷಣವನ್ನು ಮಾಡಿದ್ದಾರೆ ಎಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

(ಸಶೇಷ)

—o—

ಮಾರ್ಕೆಟಿಂಗ್ ಮಿಡಿಯಾ ಸರ್ವಿಸಸ್

ವಾಣಿಜ್ಯ ಸಂಸ್ಥೆಗಳಿಗೆ ಸಿನೇಮಾ ಪ್ರಚಾರ, ಶೋ ವಿಂಡೊಗಳು, ಬಸ್ ಶೆಲ್ಟರ್ ಪ್ರಚಾರ, ವಾಹನಗಳ ಪೆನಲ್ ಮುಂತಾದ ರೀತಿಯಲ್ಲಿ ಪ್ರಚಾರ ನೀಡಲು ನೆರವಾಗುವ ವಿನೂತನ ಶೈಲಿಯ ಮಾರ್ಕೆಟಿಂಗ್ ಮಿಡಿಯಾ ಸರ್ವಿಸಸ್ ಹೆಸರಿನ ಸಂಸ್ಥೆಯೊಂದನ್ನು ತಾ. 28ರಂದು ಮಂಗಳೂರಲ್ಲಿ ನಗರಸಭಾಧ್ಯಕ್ಷ ಶ್ರೀ| ಬ್ಲೇಸಿಯಸ್ ಡಿ'ಸೋಜಾರವರು ಉದ್ಘಾಟಿಸಿದರು. ಸಂಸ್ಥೆಯ ಪಾಲುದಾರ ಶ್ರೀ| ಎಂ. ರಮೇಶ ಪೈಗಳು ಸಂಸ್ಥೆಯ ಕಾರ್ಯವ್ಯಾಪ್ತಿಯ ಬಗ್ಗೆ ವಿವರಣೆ ನೀಡಿದರು. ಆರಂಭದಲ್ಲಿ ಫೋರಮ್ ಆಫ್ ಫ್ರೀ ಎಂಟರ್ ಪ್ರೈಸ್ ಸಂಸ್ಥೆಯ ಕಾರ್ಯದರ್ಶಿ ಶ್ರೀ| ಎಂ. ಆರ್. ಪೈಗಳು ಸ್ವಾಗತಿಸಿ, ಕೊನೆಯಲ್ಲಿ ಶ್ರೀ| ಕೃಷ್ಣಪ್ರಭುಗಳು ಧನ್ಯವಾದ ಅರ್ಪಿಸಿದರು.

ಒಕ್ಕಲುಗಳಿಗೆ ಭರವಸೆ

ದಕ್ಷಿಣ ಕನ್ನಡ ಜಿಲ್ಲೆಯ ನೆರೆಪೀಡಿತ ಪ್ರದೇಶಗಳಲ್ಲಿನ ಒಕ್ಕಲುಗಳನ್ನು ಭೂಮ್ಹಾಲಕರು ದಮನಿಸದಂತೆ ಕಾನೂನು ರೀತ್ಯಾ ಸೂಕ್ತ ರಕ್ಷಣೆಯನ್ನು ಒದಗಿಸಲಾಗುವುದೆಂದು ದ. ಕ. ಜಿಲ್ಲಾಧಿಕಾರಿ ಶ್ರೀ| ಎಸ್. ಬಿ. ಮುದ್ದಪ್ಪನವರು ತಾ. 29ರಂದು ಪತ್ರಕರ್ತರನ್ನು ಉದ್ದೇಶಿಸಿ ತಿಳಿಸಿರುತ್ತಾರೆ.

ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರ

ಮಂಗಳೂರು ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದ ಸಲಹಾಸಮಿತಿಯ ಸಭೆಯೊಂದು ಇತ್ತೀಚೆಗೆ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಕೇಂದ್ರದಲ್ಲಿ ತೆರವಾಗಿರುವ ಸಹ ಕಾರ್ಯಕರ್ತರ ಹುದ್ದೆಗೆ ವಿದ್ವಾನ್ ಶ್ರೀ| ಪಿ. ಕೆ. ನಾರಾಯಣರ ಹೆಸರನ್ನು ಶಿಫಾರಸುಮಾಡಲಾಯಿತು.

ರೈಲುಬಂಡಿಗಳ ವೇಗ ಹೆಚ್ಚಳ

ಅಕ್ಟೋಬರ ತಾ. 1ರಿಂದ ಜ್ಯಾರಿಗೆ ಬರುವ ಹೊಸ ರೈಲ್ವೆ ವೇಳಾಪಟ್ಟಿಯ ಪ್ರಕಾರ, ನಂಬ್ರ 29 ಮೈಲ್ ಮತ್ತು ಎಕ್ಸ್‌ಪ್ರೆಸ್ ರೈಲುಬಂಡಿಗಳೂ ಸೇರಿದಂತೆ ಪ್ರಯಾಣಿಕರ ಗಾಡಿಗಳ ಪ್ರಯಾಣದ ವೇಗವನ್ನು 15ರಿಂದ 115 ನಿಮಿಷಗಳ ಕಾಲ ಹೆಚ್ಚಿಸಲಾಗುತ್ತದೆ.

ಅದರಂತೇ 24ನೇ ನಂಬರಿನ ಮದ್ರಾಸ್—ಬೆಂಗಳೂರು ಎಕ್ಸ್‌ಪ್ರೆಸ್ ಗಾಡಿಯ ಪ್ರಯಾಣದ ಅವಧಿಯನ್ನು 100 ನಿಮಿಷಗಳ ಕಾಲ ತಗ್ಗಿಸಲಾಗುವುದು. 138ನೇ ನಂಬರಿನ ಮದ್ರಾಸ್-ತಿರುವನಂತಪುರ ಎಕ್ಸ್‌ಪ್ರೆಸ್ ಗಾಡಿಯ ಪ್ರಯಾಣದ ಅವಧಿಯು 115 ನಿಮಿಷಗಳಷ್ಟು ಕಡಿಮೆಯಾಗುವುದು.

——

ಮದ್ಯಪಾನ ಹಾಗೂ ಪಿತ್ತಜನಕಾಂಗದ ವ್ಯಾಧಿ

ಕೇವಲ ಮದ್ಯಪಾನವೊಂದೇ ಪಿತ್ತಜನಕಾಂಗದ ವ್ಯಾಧಿಗೆ ಕಾರಣವಲ್ಲ, ಮದ್ಯಪಾನದೊಂದಿಗೆ ಪುಷ್ಟಿಕರವಲ್ಲದ ಆಹಾರದ ಸೇವನೆಯೂ ಜತೆಗೂಡಿದರೆ ಮಾತ್ರ ಪಿತ್ತಜನಕಾಂಗದ ದೋಷಗಳು ತಲೆದೋರುವವು ಎಂದು ದೀರ್ಘಕಾಲದಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ಆದರೆ ಉತ್ತಮ ಆಹಾರದ ಸೇವನೆಯಿದ್ದರೂ ಪಿತ್ತಜನಕಾಂಗಕ್ಕೆ ವ್ಯಾಧಿ ತಗಲದಂತೆ ಮಾಡಲು ಸಾಧ್ಯವಿಲ್ಲವೆಂದು ತಮ್ಮ ಅಧ್ಯಯನಗಳಿಂದ ತಿಳಿದುಬಂದಿದೆ ಎಂದು ನ್ಯೂಯಾರ್ಕ್‌ನ ಮೌಂಟ್ ಸಿನಾಯ್ ಆಸ್ಪತ್ರೆಯ ಸಂಶೋಧಕರು ಹೇಳುತ್ತಾರೆ. ಅವರು ಸುಮಾರು ನಾಲ್ಕು ವರ್ಷಗಳ ವರೆಗೆ "ಬಬೂನ್" ಕೋತಿಗಳಿಗೆ ಪ್ರತಿದಿನ ಹೆಂಡ ಕುಡಿಸಿದರು.

ಪುಷ್ಟಿಕರ ಆಹಾರವು ಮದ್ಯಪಾನದಿಂದುಂಟಾಗುವ ಪಿತ್ತಜನಕಾಂಗದ ವ್ಯಾಧಿಗಳನ್ನು ತಡೆಗಟ್ಟಲಾರದು ಎಂದು ಡಾ| ಚಾರ್ಲ್ಸ್ ಲೈಬರ್ ಮತ್ತು ಡಾ| ಇಮಾನ್ಯುವೆಲ್ ರೂಬಿನ್ ಹೇಳುತ್ತಾರೆ. ಸೇವಿಸಲಾದ ಮದ್ಯದ ಒಟ್ಟು ಪ್ರಮಾಣವೇ ನಿರ್ಣಾಯಕ ಅಂಶ ಎಂದವರು ಹೇಳುತ್ತಾರೆ.

ಬಬೂನ್ ಕೋತಿಗಳಲ್ಲಿ ಮದ್ಯಪಾನಜನ್ಯ ಪಿತ್ತಜನಕಾಂಗ ವ್ಯಾಧಿಯ ಸಂಪೂರ್ಣ ಚಿತ್ರವನ್ನು ಉಂಟುಮಾಡಿರುವ ಅವರು ಮದ್ಯಪಾನದ ಚಟದಿಂದ ಉಂಟಾಗುವ ಹಾನಿಯನ್ನು ಅಭ್ಯಸಿಸಲು ವಿಜ್ಞಾನಿಗಳಿಗೆ ಸಹಾಯಕವಾಗಬಲ್ಲ ಮೊದಲನೆಯ ಪ್ರಾಣಿ 'ಮೊಡೆಲ್'ಅನ್ನು ತಾವು ಸಿದ್ಧಗೊಳಿಸಿದ್ದೇವೆ ಎಂದು ಹೇಳಿದರು. ಈ ವೈದ್ಯರು ಇಪ್ಪತ್ತಾರು ಪ್ರಾಣಿಗಳನ್ನು ಅಧ್ಯಯನಕ್ಕೆ ಗುರಿಪಡಿಸಿದರು. ಇವುಗಳಲ್ಲಿ ಹದಿಮೂರು ಬಬೂನ್‌ಗಳ ದ್ರವಾಹಾರದಲ್ಲಿ ಮದ್ಯವೂ ಸೇರಿತ್ತು. ಇವುಗಳಿಗೆ ಪಿತ್ತಜನಕಾಂಗದ ವ್ಯಾಧಿ ತಗಲಿತು. ಉಳಿದ ಹದಿಮೂರು ಬಬೂನ್‌ಗಳಿಗೆ ಮದ್ಯವೊಂದನ್ನು ಬಿಟ್ಟು ಅದೇ ಬಗೆಯ ಆಹಾರವನ್ನು ಕೊಡಲಾಯಿತು. ಇವುಗಳಿಗೆ ವ್ಯಾಧಿ ತಗಲಲಿಲ್ಲ.

ಹೀಗೆ ಹಾನಿಗೊಳಗಾದ ಪಿತ್ತಜನಕಾಂಗಗಳು ಮಾನವರಿಗೆ ತಗಲುವ ವ್ಯಾಧಿಯಂತೆಯೇ ಇದ್ದವು, ತಜ್ಞರಿಗೂ ಇವು ಬಬನ್‌ಗಳ ಪಿತ್ತಜನಕಾಂಗಗಳೆಂದು ಗುರುತಿಸಲು ಸಾಧ್ಯವಾಗಲಿಲ್ಲ.

ತುಳುಕೂಟದ ವಾರ್ಷಿಕೋತ್ಸವ

ಮಂಗಳೂರು ತುಳುಕೂಟದ ನಾಲ್ಕನೇ ವಾರ್ಷಿಕೋತ್ಸವವು ತಾ. 29ರಂದು ಪುರಭವನದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಬೆಳಗ್ಗೆ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ| ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿದ ಯುವಜನ ಸಮ್ಮೇಳನವನ್ನು ಶ್ರೀ| ಕಯ್ಯಾರ ಕಿಂಞಣ್ಣ ರೈಯವರು ಉದ್ಘಾಟಿಸಿದರು. ಶ್ರೀ| ಏರ್ಯ ಲಕ್ಷ್ಮೀನಾರಾಯಣ ಆಳ್ವರು ಮುಖ್ಯ ಅತಿಥಿಯಾಗಿ ಭಾಷಣ ಮಾಡಿದರು. ಮಧ್ಯಾಹ್ನ ಡಾ| ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ಭಾಷೆಯ ಕುರಿತಾದ ವಿಚಾರಸಂಕಿರ್ಣದಲ್ಲಿ ಶ್ರೀ| ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ತುಳು ಲಿಪಿಯ ಕುರಿತಾದ ಪ್ರಬಂಧ ಮಂಡಿಸಿ ಅದರ ಮೇಲೆ ಚರ್ಚೆ ನಡೆದಿತ್ತು. ಸಾಯಂಕಾಲ ಧರ್ಮಸ್ಥಳದ ಶ್ರೀ| ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಕೆನರಾ ಸೇಲ್ಸ್ ಕೊರ್ಪೊರೇಶನಿನ ಮೆನೆಜಿಂಗ್ ಡೈರೆಕ್ಟರ್ ಶ್ರೀ| ಎಲ್. ವಿ. ಕುಡ್ವಾರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ತುಳುಸಾಹಿತ್ಯ, ಯಕ್ಷಗಾನ, ನಾಟಕ, ಜಾನಪದ ಕ್ಷೇತ್ರಗಳಲ್ಲಿ ದೀರ್ಘಕಾಲದ ಸೇವೆಗೈದ ಶ್ರೀ| ಪಾಲ್ತಾಡಿ ಶಂಕರನಾರಾಯಣ ಸಾಮಗ, ರಾಮ ಕಿರೋಡಿಯನ್ ಮತ್ತು ಮುದರ ಬಜ್ಪೆ ಅವರನ್ನು ಸನ್ಮಾನಿಸಲಾಯಿತು. ಶ್ರೀ| ಕಂದಾವರ ವಾದಿರಾಜ ಭಟ್ಟರು ಸಂಗ್ರಹಿಸಿದ್ದ 'ತುಳುಪಾಡ್ದನ ಸಂಗ್ರಹ' ಎಂಬ ಪ್ರಕಟಣೆಯನ್ನು ಶ್ರೀ| ವೀರೇಂದ್ರ ಹೆಗ್ಗಡೆಯವರು ಬಿಡುಗಡೆಗೊಳಿಸಿದರು. 'ತುಳುನಾಡೆಂದು ಪ್ರಸಿದ್ಧವಾಗಿರುವ ದಕ್ಷಿಣ ಕನ್ನಡ ಜಿಲ್ಲೆ ಇಂದು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಿದ್ದು, ನಮ್ಮ ಯುವಜನರ ಕ್ರಿಯಾಶಕ್ತಿಯನ್ನು ನಮ್ಮಲ್ಲೇ ನಮ್ಮ ಅಭಿವೃದ್ಧಿಗಾಗಿ ಉಳಿಸಿಕೊಳ್ಳುವ ಭಾಗ್ಯ ದೊರಕಿದೆ. ಈ ಭಾಗ್ಯದ ಸದುಪಯೋಗ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಭಾಷಾಭಿಮಾನ ಮನುಷ್ಯನಿಗೆ ಮುಖ್ಯ. ಆದರೆ ಈ ಅಭಿಮಾನ ದೇಶದ ಐಕ್ಯತೆಗೆ ಕೊಡಲಿಯಾಗಬಾರದು" ಎಂಬುದಾಗಿ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ಪ್ರಾರಂಭದಲ್ಲಿ ತುಳುಕೂಟದ ಅಧ್ಯಕ್ಷ ಶ್ರೀ| ಎಸ್. ಆರ್. ಹೆಗ್ಡೆಯವರು ಸ್ವಾಗತಿಸಿ ಕೊನೆಯಲ್ಲಿ ಕಾರ್ಯದರ್ಶಿ ಶ್ರೀ| ಎ. ಸಿ. ಭಂಡಾರಿಯವರು ಧನ್ಯವಾದ ಅರ್ಪಿಸಿದರು.

ನೆರೆಸಂತ್ರಸ್ತರಿಗೆ ನೆರವು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಭಾರೀ ನೆರೆಗೆ ತುತ್ತಾಗಿದ್ದ ಸಂತ್ರಸ್ತರಿಗಾಗಿ ಮೈಸೂರು ಜಿಲ್ಲೆಯಲ್ಲಿ ಸಂಗ್ರಹಿಸಲಾದ ರೂ. 1,00,001 ನೆರವಿನ ಚೆಕ್ಕೊಂದನ್ನು ನಿಧಿ ಶೇಖರಣಾ ಸಮಿತಿಯ ಅಧ್ಯಕ್ಷ ಶ್ರೀ| ಎಫ್. ಕೆ. ಇರಾನಿ ಅವರು ವಿಭಾಗಾಧಿಕಾರಿ ಶ್ರೀ| ಸ್ಯಾಮ್ಯುಯೆಲ್ ಅಪ್ಪಾಜಿ ಅವರಿಗೆ ನೀಡಿದರು.

ಕಳ್ಳಸಾಗಾಣಿಕೆದಾರರ ಶರಣಾಗತಿ

ಕೇರಳದ ಎರಡನೇ ನಂಬರ್ ಕಳ್ಳಸಾಗಾಣಿಕೆದಾರನೆಂದೂ ಅನೇಕ ಕಳ್ಳಸಾಗಾಣಿಕೆದಾರರ ಗುರುವೆಂದು ಹೆಸರು ಪಡೆದ, ಈ ವರ್ಷದ ಆರಂಭದಲ್ಲಿ ಕಾಸರಗೋಡು ಬಳಿ 30 ಲಕ್ಷ ರೂಪಾಯಿ ಅಕ್ರಮ ಬೆಳ್ಳಿ ಪ್ರಕರಣದಲ್ಲಿ ಸಿಕ್ಕುಬಿದ್ದು, ಬಂಧಿತನಾಗಿ ಜಾಮೀನು ಪಡೆದು ಇದೀಗ ಆಂತರಿಕ ಭದ್ರತಾ ನಿರ್ವಹಣಾ ಶಾಸನದನ್ವಯ ವಾರಂಟು ಹೊರಡಿಸಲಾಗಿದ್ದ ಕಾಸರಗೋಡಿನ ಕಲ್ಲಟ್ರ ಅಬ್ದುಲ್‌ಖಾದರ್ ಹಾಜಿ ತಾ. 2ರಂದು ಮಂಗಳೂರಲ್ಲಿ ಕಸ್ಟಮ್ಸ್ ಅಧಿಕಾರಿಗಳಿಗೆ ಶರಣಾದನು. ಕಾಸರಗೋಡಿನ ಪೋಲೀಸ್ ಅಧಿಕಾರಿಗಳು ಮಂಗಳೂರಿಗೆ ಆಗಮಿಸಿ ಕಲ್ಲಟ್ರನನ್ನು ಕಾಸರಗೋಡಿಗೆ ಕರೆದೊಯ್ದರು. ಅಲ್ಲಿಂದ ಆತನನ್ನು ಅಂದು ರಾತ್ರಿಯೇ ಕಣ್ಣಾನೂರಿಗೆ ಕೊಂಡೊಯ್ದು ಸೆಂಟ್ರಲ್ ಜೈಲಿಗೆ ಸೇರಿಸಲಾಯಿತು.

ಮಂಗಳೂರು ಬಳಿ ಫಾಸ್ಪೇಟ್ ಕಾರ್ಖಾನೆ

ಗೊಬ್ಬರಕ್ಕೆ ಮಿಶ್ರಮಾಡುವ ಫಾಸ್ಫೇಟ್ ಕಾರ್ಖಾನೆಯೊಂದನ್ನು ಮಂಗಳೂರು ಬಳಿ ಬೃಹತ್ ಪ್ರಮಾಣದಲ್ಲಿ ಸ್ಥಾಪಿಸಲು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಕೊರ್ಪೊರೇಶನು ಉದ್ದೇಶಿಸಿದೆ ಎಂದು ಅದರ ಅಧ್ಯಕ್ಷ ಶ್ರೀ| ಎಂ. ಡಿ. ಶಿವನಂಜಪ್ಪರಿಂದ ತಿಳಿದು ಬರುತ್ತದೆ.

ಮಣ್ಣಗುಡ್ಡೆಯಲ್ಲಿ ಕರ್ನಾಟಕ ಬೇಂಕಿನ ಶಾಖೆ

ಮಂಗಳೂರು ಮಣ್ಣಗುಡ್ಡೆಯ 'ಪ್ರೇಮ್ ಸಾಗರ್' ಕಟ್ಟಡದಲ್ಲಿ ಕರ್ನಾಟಕ ಬ್ಯಾಂಕಿನ ನೂತನ ಶಾಖೆಯನ್ನು ತಾ. 1ರಂದು ಮಂಗಳೂರು ನಗರಸಭಾಪತಿ ಶ್ರೀ| ಬ್ಲೇಸಿಯಸ್ ಡಿ'ಸೋಜಾರವರು ಉದ್ಘಾಟಿಸಿದರು. ಮಣೇಲ ಶ್ರೀನಿವಾಸ ನಾಯಕ್‌ರವರು ಸಭಾಧ್ಯಕ್ಷತೆ ವಹಿಸಿದ್ದರು.

——

ಅದೃಷ್ಟಹೀನ ಮಕ್ಕಳ ಪಾಲನೆ

ಅಮೆರಿಕದ ಈ ವಿಶಿಷ್ಟ ಕಾರ್ಯರಂಗದ ಕುತೂಹಲದಾಯಕ ವಿವರ

ವಾರದಲ್ಲಿ ಐದು ದಿನ ಮೇರಿಲೇಂಡ್‌ನ ಪೇಸನ್ಸ್ ಕಾರ್ನರ್‌ನಲ್ಲಿರುವ 76 ವರ್ಷ ವಯಸ್ಸಿನ ಶ್ರೀಮತಿ ಮೇರಿ ಸ್ಮಿತ್, ಬೆಳಗಾಗುವ ಮುಂಚೆಯೇ ಏಳುತ್ತಾರೆ. ಒಂದು ವಿಶೇಷ ಬಸ್ ಆಕೆಯನ್ನು ಸುಮಾರು 30 ಕಿಲೋಮೀಟರುಗಳ ದೂರದಲ್ಲಿ ಕುತೂಹಲದಿಂದ ಕಾಯುತ್ತಿರುವ ಇಬ್ಬರು ಮಕ್ಕಳ ಬಳಿಗೆ ಒಯ್ಯುತ್ತದೆ. ಆಕೆ ಅವರ ಸಂಬಂಧಿಯಲ್ಲ, ಆದರೆ ಒಂದು ಅಪೂರ್ವ ಕಾರ್ಯಕ್ರಮದ ಮೇರೆಗೆ ಅವರ ಸಾಕು ಅಜ್ಜಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

"ಫೋಸ್ಟರ್ ಗ್ರೇಂಡ್ ಪೇರೆಂಟ್" ಕಾರ್ಯಕ್ರಮದ ಮೇರೆಗೆ ಪ್ರತಿನಿತ್ಯ ಗ್ರೆನೀ ಬಸ್ ("ಅಜ್ಜಿ ಬಸ್" ಎಂದು ಅರ್ಥ) ಗಳಲ್ಲಿ ಪ್ರಯಾಣಮಾಡುತ್ತಿರುವ 65 ಮಂದಿಯಲ್ಲಿ ಶ್ರೀಮತಿ ಸ್ಮಿತ್ ಅವರೂ ಒಬ್ಬರು. ಇವರೆಲ್ಲರೂ 60 ವರ್ಷಕ್ಕೆ ಮೇಲ್ಪಟ್ಟವರು. ಈ ರಾಷ್ಟ್ರೀಯ ಯೋಜನೆ ಅಮೆರಿಕದಾದ್ಯಂತ ಮತ್ತು ಪ್ಯೂರ್ಟೋರಿಕೋದಲ್ಲಿ 11,400 ಮಂದಿ ವೃದ್ಧರು ಮತ್ತು 22,800 ಮಂದಿ ಮಕ್ಕಳನ್ನು ಒಳಗೊಂಡಿದೆ. ಎಂಟು ವರ್ಷ ಹಳೆಯದಾದ ಈ ಕಾರ್ಯಕ್ರಮವು 60 ವರ್ಷಕ್ಕೆ ಮೇಲ್ಪಟ್ಟ ಅಲ್ಪಾದಾಯದ ಸ್ತ್ರೀ ಪುರುಷರಿಗೆ ಕೆಲಸ ಮತ್ತು ಉದ್ಯೋಗವನ್ನೂ ಮತ್ತು ಮಕ್ಕಳಿಗೆ ವೈಯಕ್ತಿಕ ಆರೈಕೆಯನ್ನೂ ಒದಗಿಸುತ್ತಿದೆ. (ಸಾಕು ಅಜ್ಜ ಅಜ್ಜಿಯರಿಗೆ ಅವರ ವೆಚ್ಚಕ್ಕಾಗಿ ಒಂದು ಚಿಕ್ಕ ಸ್ಟೈಫೆಂಟ್ ಕೊಡಲಾಗುವುದು.)

ಶ್ರೀಮತಿ ಸ್ಮಿತ್‌ರಿಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಅರ್ಧದಷ್ಟು ಮಂದಿಯನ್ನು ಸುಮಾರು 200 ಮಂದಿ ಹಿಂದುಳಿದ ಮಕ್ಕಳಿರುವ ಕೇಂದ್ರಕ್ಕೆ ಕಳುಹಿಸಲಾಗುತ್ತಿದೆ; ಉಳಿದವರು 35 ಮಂದಿ ಮಾನಸಿಕ ದೌರ್ಬಲ್ಯವಿರುವ ಮಕ್ಕಳಿಗಾಗಿ ಖಾಸಗಿಯಾಗಿ ನಡೆಯುತ್ತಿರುವ ಶಾಲೆಗೆ ಮತ್ತು ಒಂದು ಹುಡುಗರ ಸ್ಟೇಟ್ ರಿಫಾರ್ಮೇಟರಿಗೆ ಹೋಗುತ್ತಾರೆ. ಸಾಕು-ಅಜ್ಜ ಅಜ್ಜಿಯರು ವಾರದಲ್ಲಿ ತಲಾ 20 ಗಂಟೆಗಳ ಕಾಲ ಇಬ್ಬರು ಮಕ್ಕಳೊಡನೆ ಕಾಲಕಳೆಯುವರು; ಈ ಮಕ್ಕಳಿಗೆ ತಾವೇ ಆಹಾರ ತೆಗೆದುಕೊಳ್ಳಲು ಮತ್ತು ಉಡುಪು ಧರಿಸಲು ಕಲಿಯಲು ಸಹಾಯ ಮಾಡುವರು; ಅವರನ್ನು ಈಜಲು ಮತ್ತು ಮೀನು ಹಿಡಿಯಲು ಹಾಗೂ ವಾಷಿಂಗ್ಟನ್ ಡಿ. ಸಿ. ಸಮೀಪದ ಮ್ಯೂಸಿಯಂಗಳಿಗೆ ಕರೆದೊಯ್ಯುತ್ತಾರೆ; ಅವರಿಗೆ ಓದಿ ಹೇಳುತ್ತಾರೆ ಅಥವಾ ಫಿಸಿಕಲ್ ಥೆರಪಿಯ ಮೂಲಕ ಮಾತಾಡಲು ಕಲಿಯಲು ಸಹಾಯ ಮಾಡುತ್ತಾರೆ ಬಹುತೇಕ ಮಕ್ಕಳು ತಮ್ಮ ಮನೆ ಹಾಗೂ ಕುಟುಂಬಗಳಿಂದ ಪ್ರತ್ಯೇಕವಾಗಿ ದೂರವಿರುವುದರಿಂದ ಅವರಲ್ಲನೇಕರಿಗೆ ವಂಚಿತವಾಗಿರುವ ಸಾಮೀಪ್ಯ, ಪ್ರೀತಿ ಹಾಗೂ ವೈಯಕ್ತಿಕ ಆರೈಕೆಯನ್ನು ಒದಗಿಸಲುವುದು ಅವರ ಮುಖ್ಯ ಕೊಡುಗೆ.

ಈ ರಾಷ್ಟ್ರವ್ಯಾಪೀ ಕಾರ್ಯಕ್ರಮಕ್ಕೆ ಫೆಡರಲ್ ನಿಧಿಗಳಿಂದ 25 ದಶಲಕ್ಷ ಡಾಲರ್‌ಗಳ ಹಣಸಹಾಯವನ್ನೊದಗಿಸಲಾಗಿದೆ, ಇದು ಅಗತ್ಯವಿರುವ ಒಟ್ಟು ಬಜೆಟ್‌ನ ಶೇಕಡ 82ರಷ್ಟು. ಉಳಿದಂಶವನ್ನು ಸ್ಥಳೀಯ ಸಮುದಾಯಗಳು ಒದಗಿಸುತ್ತವೆ. ಸಾಕು ಅಜ್ಜ ಅಜ್ಜಿಯರು ಗಂಟೆಗೆ ತಲಾ 1-60 ಡಾಲರ್ ಪಡೆಯುತ್ತಾರೆ. ಆದರೆ, ಅವರನ್ನು ಬಹುತೇಕ ಸ್ವಯಂಸೇವಕರೆಂದೇ ಪರಿಗಣಿಸಲಾಗುವುದು, ಏಕೆಂದರೆ ಅವರು ಉದ್ಯೋಗ ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದಿಲ್ಲ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹತೆ ಪಡೆಯಬೇಕಾದರೆ ಸಾಕು ಅಜ್ಜ ಅಜ್ಜಿಯರಾಗುವವರು, ಅವರು ಒಂಟಿಯಾಗಿದ್ದರೆ 2,000 ಡಾಲರುಗಳು ಮತ್ತು ಮದುವೆಯಾದವರಾದರೆ 2,900 ಡಾಲರ್‌ಗಳಿಗೂ ಕಡಿಮೆ ವಾರ್ಷಿಕ ಆದಾಯವಿರುವವರಾಗಬೇಕು; ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಮತ್ತು ಎರಡು ವಾರಗಳ ತರಬೇತಿಗೆ ಒಳಗಾಗಬೇಕು.

ಶ್ರೀಮತಿ ಸ್ಮಿತ್ ಭಾಗವಹಿಸುತ್ತಿರುವ ಮೇರಿಲೇಂಡ್ ಕಾರ್ಯಕ್ರಮವು ಸುಮಾರು 200,000 ಡಾಲರ್‌ಗಳ ವಾರ್ಷಿಕ ಬಜೆಟ್ ಹೊಂದಿದೆ, ಇದರ ಆಡಳಿತವನ್ನು ಶ್ರೀಮತಿ ರಾಬರ್ಟಾ ಗ್ರಾಸ್ ನಿರ್ವಹಿಸುತ್ತಿದ್ದಾರೆ. "ಅನೇಕ ಮಂದಿ ವಯಸ್ಸಾದವರು ತಮ್ಮ ಬಾಳು ಬರೀ ಶೂನ್ಯ ಎಂದು ಭಾವಿಸುತ್ತಾರೆ. ಅಂಥವರಿಗೆ ಏನಾದರೂ ಕೆಲಸಮಾಡುವ ಅವಕಾಶವನ್ನು ಈ ಕಾರ್ಯಕ್ರಮ ಒದಗಿಸುತ್ತದೆ" ಎಂದು ಆಕೆ ಹೇಳುತ್ತಾರೆ. ಆಕೆ ಅಜ್ಜ ಅಜ್ಜಿಯರಲ್ಲನೇಕರನ್ನು ಚರ್ಚ್‌ಗಳ ಮೂಲಕ, ವಿಶೇಷವಾಗಿ ಚಿಕ್ಕ ಕಾಂಗ್ರಿಗೇಶನ್‌ಗಳ ಮೂಲಕ, ಸೀನಿಯರ್ ಸಿಟಿಜನ್ಸ್ ಕ್ಲಬ್‌ಗಳ ಮೂಲಕ, ಅಂಗಡಿಗಳ ಬುಲೆಟಿನ್ ಬೋರ್ಡ್‌ಗಳಲ್ಲಿ ನೋಟೀಸ್‌ಗಳನ್ನು ಹಾಕುವ ಮೂಲಕ ಮತ್ತು ಬಾಯಿಂದ ಬಾಯಿಗೆ ಪ್ರಚಾರದ ಮೂಲಕ ಕೆಲಸಕ್ಕೆ ಆಯ್ಕೆಮಾಡುತ್ತಾರೆ. ಅವರಲ್ಲಿ ಹೆಚ್ಚಿನವರು ವಾಸ್ತವದಲ್ಲಿ ಅಜ್ಜ ಅಜ್ಜಿಯರಾಗಿರುತ್ತಾರೆ. ಅವರಿಗೆ ಯಾವುದೇ ಶಿಕ್ಷಣ ಅಥವಾ ತರಬೇತಿಯ ಅಗತ್ಯವಿರುವುದಿಲ್ಲ.

ಸಾಕು ಅಜ್ಜ ಅಜ್ಜಿಯರು ಅದೃಷ್ಟಹೀನರಾದ ಕಿರಿಯರಿಗೆ ವಿಶೇಷ ಹಾಗೂ ಅಮೂಲ್ಯವಾದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಮೇರಿಲೇಂಡ್ ಕಾರ್ಯಕ್ರಮದ ಮತ್ತು ಅಮೆರಿಕದ ಎಲ್ಲೆಡೆಗಳ ಕಾರ್ಯಕ್ರಮಗಳ ದಾಖಲೆಗಳು ಸೂಚಿಸುತ್ತವೆ. ಮಕ್ಕಳು ವೈಯಕ್ತಿಕ ಪ್ರೀತಿ ಹಾಗೂ ಆರೈಕೆಯನ್ನು ಪಡೆಯುತ್ತಾರೆ ಮತ್ತು ಅವರಲ್ಲನೇಕರಿಗೆ ಹಿಂದೆ ಪರಿಚಯವಿಲ್ಲದಂಥ ಮಮತೆ ಹಾಗೂ ಧ್ವನಿ ಮತ್ತು ಸ್ಪರ್ಶದ ಆನಂದವನ್ನು ಪಡೆಯುತ್ತಾರೆ. ಆದರೆ ಶ್ರೀಮತಿ ಗ್ರಾಸ್ ಮತ್ತು ಸಾಕು ಅಜ್ಜ ಅಜ್ಜಿಯರ ಪ್ರಕಾರ "ಅವರ ಸ್ವಾರ್ಥ ರಹಿತ, ಪ್ರೀತಿ, ವೈಯಕ್ತಿಕ ಕಳಕಳಿ ಹಾಗೂ ತೀವ್ರ ಗಮನ ಅನುಕಂಪ ಮತ್ತು ವಾತ್ಸಲ್ಯ"ಗಳು ಈ ಎಲ್ಲವನ್ನೂ ಸಾಧ್ಯಗೊಳಿಸಿವೆ.

— —

ಯುವಜನ ರಂಗ

ಶ್ರೀ| ಜೈಪ್ರಕಾಶ ನಾರಾಯಣ್ ಅವರ ಚಳವಳಿಯನ್ನು ಬೆಂಬಲಿಸುವ ಸಲುವಾಗಿ ಕರ್ನಾಟಕದ ಯುವಜನಾಂಗವು ಐಕ್ಯ ಯುವಜನಾಂಗವನ್ನು ಸ್ಥಾಪಿಸಿದ್ದು ಇದರ ಕನ್ನಡ ಘಟಕವನ್ನು ಶ್ರೀ| ಕೃಷ್ಣ ಕುಮಾರ ಪೂಂಜ ಅವರ ನೇತೃತ್ವದಲ್ಲಿ ಸ್ಥಾಪಿಸಲಾಗಿದೆಯೆಂದು ತಿಳಿದುಬಂದಿದೆ.

ಹೊಸ ಜಿಲ್ಲಾಧಿಕಾರಿಗಳು

ದ. ಕ. ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿ ಶ್ರೀ| ಜೆ. ಕೆ. ಅರೋರಾರವರ ಸ್ಥಾನಕ್ಕೆ ಜಿಲ್ಲೆಗೆ ಆಗಮಿಸಿರುವ ಶ್ರೀ| ಎಸ್. ಬಿ. ಮುದ್ದಪ್ಪ ಅವರು ಈ ಜಿಲ್ಲೆಗೆ ನೂರನೇ ಜಿಲ್ಲಾಧಿಕಾರಿಗಳು. 1799 ಜುಲೈ 8ರಂದು ಆರಂಭವಾದ ಈ ಜಿಲ್ಲೆಯ ಜಿಲ್ಲಾಧಿಕಾರಿಗಳ ಚರಿತ್ರೆ ಶ್ರೀ| ಮುದ್ದಪ್ಪನವರೊಂದಿಗೆ ಶತಮಾನೋತ್ಸವ ಆಚರಿಸುತ್ತದೆ. ಮೇಜರ್ ಮನ್ರೋ ಈ ಜಿಲ್ಲೆಯ ಪ್ರಥಮ ಡಿಸ್ಟ್ರಿಕ್ಟ್ ಕಲೆಕ್ಟರರು. 1955ರಲ್ಲಿ ಶ್ರೀ| ಅರೇಕರ ಕುಂಞಂಬುರವರೊಡನೆ ಕಲೆಕ್ಟರ್ ಪದ್ಧತಿ ನಿಂತುಹೋಗಿ, ಡೆಪ್ಯುಟಿ ಕಮೀಷನರ್ ಪದ್ಧತಿ ಜ್ಯಾರಿಗೆ ಬಂದಿತ್ತು.

'ಚೋಮನ ದುಡಿ' ಚಿತ್ರೀಕರಣಾರಂಭ

ಕಟಪಾಡಿಯ ಶ್ರೀ| ಮುದ್ದು ಸುವರ್ಣರು ನಿರ್ಮಿಸಿ, 'ಸಂಸ್ಕಾರ' ಖ್ಯಾತಿಯ ಶ್ರೀ| ಬಿ. ವಿ. ಕಾರಂತರು ನಿರ್ದೇಶಿಸುತ್ತಿರುವ ಪದ್ಮಭೂಷಣ ಡಾ| ಶಿವರಾಮ ಕಾರಂತರ ಕಾದಂಬರಿ 'ಚೋಮನ ದುಡಿ' ಕನ್ನಡ ಚಿತ್ರದ ಚಿತ್ರೀಕರಣ ಬೆಳ್ತಂಗಡಿ ಸಮೀಪ ಕಿಲ್ಲೂರಿನಲ್ಲಿ ಅಕ್ಟೋಬರ್ ತಾ 2 ಗಾಂಧಿ ಜಯಂತಿ ದಿನದಂದು ಆರಂಭವಾಯಿತು. ಡಾ| ಶಿವರಾಮ ಕಾರಂತರು ಕೆಮರ ಚಾಲನೆ ಮಾಡಿದ್ದು, ಸಮಾಜಸೇವಾಕರ್ತ ಶ್ರೀ| ಜಿ. ಎಸ್. ಭಿಡೆಯವರು ಕ್ಲ್ಯಾಪ್ ಮಾಡಿದರು.

ಕೊಂಕಣಿ ನಾಟಕ ಸಭೆಯ ವಾರ್ಷಿಕೋತ್ಸವ

ಕೊಂಕಣಿ ನಾಟಕ ಸಭೆಯ ವಾರ್ಷಿಕೋತ್ಸವವು ತಾ. 29ರಂದು ಮಂಗಳೂರು ಡೊನ್‌ಬೊಸ್ಕೊ ಹೋಲಿನಲ್ಲಿ ಶ್ರೀ| ಶಿರ್ತಾಡಿ ವಿಲಿಯಂ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ನಾಟಕಸಭೆಯ ಏಳ್ಗೆಗಾಗಿ ದೀರ್ಘಕಾಲ ಶ್ರಮಿಸಿದ ದಿ| ಫಾದರ್ ಫಿಲಿಪ್ ನೇರಿಯವರ ತೈಲಚಿತ್ರವನ್ನು ಈ ಸಂದರ್ಭದಲ್ಲಿ ಅನಾವರಣಗೊಳಿಸಲಾಯಿತು. ಕೊಂಕಣಿ ಸಾಹಿತ್ಯಕ್ಕೆ ಅಪಾರ ಸೇವೆಸಲ್ಲಿಸಿದ ಶ್ರೀ| ವಿ. ಜೆ. ಪಿ. ಸಲ್ದಾನಾ ('ಖಡಾಪ್') ಅವರನ್ನು ಸನ್ಮಾನಿಸಲಾಯಿತು. ಕೊನೆಯಲ್ಲಿ ಕೊಂಕಣಿ ನಾಟಕ ಸಭೆಯವರು ಏರ್ಪಡಿಸಿದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ 'ಅಂಕ್ವಾರ್ ಮೇಸ್ತ್ರಿ' ನಾಟಕವನ್ನು ಜೆಪ್ಪೆಯವರು ಪ್ರದರ್ಶಿಸಿದರು.

— —

PRABHAT, KANNADA WEEKLY, MANGALORE-575001
REGD. No. KRNL-8.

To